“ ಶ್ರೀಪತಿರ್ಮಾನದೋ ನಃ ”

ಶ್ರೀಹರಿದಾಸಭಾರತೀ

(ಶ್ರೀಹರಿದಾಸಸಾಹಿತ್ಯಪ್ರಚಾರಕ್ಕಾಗಿ ಮೀಸಲಾದ ಮಾಸಪತ್ರಿಕೆ)

ಸಂಪುಟ ೧ ★ ಶ್ರೀ ವಿಕೃತಿ—ಪುಷ್ಯ ★ ಸಂಚಿಕೆ ೩

“ಮರದಿಯೇನೋ ರಂಗ ಮಂಗಳಾಂಗ
ತುರು ಕರು ಕಾಯ್ವಲ್ಲಿ ತೊಂಡನಾಗಿದ್ದೆನ್ನ”
—ಶ್ರೀ ಶ್ರೀಪಾದರಾಜರು

ವಾ. ಚಂದಾ ೩ ರೂಪಾಯಿ ✻ ಬಿಡಿ ಪ್ರತಿ: ೫ ಆಣೆಗಳು

ಸಂಪಾದಕರು: ಶ್ರೀಹರಿದಾಸರತ್ನಂ ಗೋಪಾಲದಾಸರು

ವಿಷಯಾನುಕ್ರಮಣಿಕೆ

ಮಂಗಳಾಚರಣೆ		೧
ಸಂಪಾದಕೀಯ	ಸಂಪಾದಕರು	೨
ಶ್ರೀಹರಿದಾಸರುಗಳ ಕೃತಿಗಳಲ್ಲಿ ಶಾಸ್ತ್ರದೃಷ್ಟಿ	ಶ್ರೀ ವರವಣಿ ರಾಮರಾವ್ ಬಿ. ಎ.	೮
ಪುರುಷಾರ್ಥ	ಶ್ರೀ ಬಿ. ಭೀಮರಾವ್ ಬಿ. ಎ.	೧೩
ದಾಸರಾಯರ ಹಿರಿಮೆ	ವಿದ್ವಾನ್ ಶ್ರೀ ಎನ್. ಕೃಷ್ಣಮೂರ್ತಿ ಬಿ.ಎ.(ಆನರ್ಸ್), ಬಿ.ಒ.ಎಲ್.	೧೮
ತತ್ವಸುವಾಲಿ	ಶ್ರೀ ಶ್ರೀ ಜಗನ್ನಾಥದಾಸರವರು	೩

ವಾಚಕರಿಗೆ........

“ಪುರುಷಾರ್ಥ” ಎಂಬ ಲೇಖನವು ಲೇಖಕರ ಹೆಸರಿಲ್ಲದೆ ಅಚ್ಚಾಗಿಹೋಗಿದೆ. ಆ ಸ್ಥಳದಲ್ಲಿ ‘ಲೇಖಕರು: ಶ್ರೀ ಬಿ. ಭೀಮರಾವ್ ಬಿ.ಎ., ಪ್ಲೀಡರ್, ದಾವಣಗೆರೆ’ ಎಂದು ಓದಿಕೊಳ್ಳಬೇಕಾಗಿ ಸೂಚಿಸುತ್ತೇವೆ. —ಸಂ.

"ಶ್ರೀಪತಿರ್ಮಾನದೋ ನಃ"



ಶ್ರೀಹರಿದಾಸಭಾರತೀ

[ಶ್ರೀಹರಿದಾಸಸಾಹಿತ್ಯ ಪ್ರಚಾರಕ್ಕಾಗಿ ಮೀಸಲಾದ
ಮಾಸಪತ್ರಿಕೆ]

ಪವಮಾನಮತಪಿಡಿದು ನಿನ್ನ ಶ್ರವಣ ಮಾ-
ಡುವರ ಸಂಗ ಪಾಲಿಸು ವಿಜಯವಿಠ್ಠಲ ವಲಿದು

ಸಂಪುಟ ೧	ಶ್ರೀ ವಿಕೃತಿ—ಪುಷ್ಯ (೧೯೫೧—ಜನವರಿ)	ಸಂಚಿಕೆ ೩

ಮಂಗಳಾಚರಣೆ

ಶ್ರೀರಾಗ ಛಾಪು ತಾಳ

ಬಂದು ನಿಂದ ಕಣ್ಣ ಮುಂದೆ ಬಂದು ನಿಂದ ಪ
ಬಂದು ನಿಂದನಿಂದು ಭಾಗವತರಪ್ರಿಯ
ಕಂದರ್ಪಜನಕ ಶ್ರೀಕರುಣಾಕರಮೂರ್ತಿ ಅ.ಪ

ಕುಟಿಲಕುಂತಳದೇವ ವಟುವೇಷದಿಂದಲಿ
ನಟನೆ ಮಾಡುತ ದಿವ್ಯ ಪಟುತರದಲಿ ತಾನು ೧

ಮುರಳಿಯನೂದುತ್ತ ಮರುಳುಗೊಳಿಸಿ ಜನರ
ಕೊರಳಪದಕ ಹಾರ ಧರಿಸಿ ತಾ ನಲಿಯುತ್ತ ೨

ಸುಜನರ ಪೊರೆಯುವ ಕುಜನರ ತರಿಯುವ
ವಿಜಯಸಾರಥಿ ನಮ್ಮ ವಿಜಯವಿಠ್ಠಲರೇಯ ೩

"ಶ್ರೀಪತಿರ್ಮಾನದೋ ನಃ"

ಸಂಪಾದಕೀಯ

ಮನ್ಮನೋಭೀಷ್ಟವರದಂ ಸರ್ವಾಭೀಷ್ಟಫಲಪ್ರದಂ
ಪುರಂದರಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಂ

ಶ್ರೀ ಹರಿದಾಸರಿಗೆಲ್ಲ ಪುರಂದರದಾಸರೆಂದರೆ ಮೈಯುಬ್ಬಿಹೋಗುತ್ತೆ. ಹಾಗಲ್ಲದೆ ಶ್ರೀವಿಜಯದಾಸರಂತಹವರು 'ಪುರಂದರದಾಸರೇ ದಾಸರೆನಬೇಕು' ಎಂದರೆ? ಆ ಶ್ರೀವಿಜಯದಾಸರಾಯರಿಗೆ ಹಿಂದೆ ತಮ್ಮ ತಂದೆಗಳಾಗಿದ್ದು ಪುನಃ ತಮಗೆ ಈ ಜನ್ಮದಲ್ಲೂ ಸ್ವಪ್ನದಲ್ಲಿ ಎದುರಿಗೆ ನಿಂದು ಉದ್ಧಾರ ಮಾಡಿದ ಮಹನೀಯರಾದ ಶ್ರೀದಾಸಾರ್ಯರವರ ನೆನಪು ಬಂತೆಂದರೆ ಆನಂದಬಾಷ್ಪ ಸುರಿಸುತ್ತಾ—

'ದಾಸರ ಭಾಗ್ಯವಿದು| ಪುರಂದರ| ದಾಸರ ಭಾಗ್ಯವಿದು
ಸರ್ವದೇಶದೊಳು ತುಂಬಿ ಸೂಸುತಿದೆ||' ಎಂದು ನಲಿಯುತ್ತಾರೆ.

"ಭೂಸುರಜನ್ಮದಿ ಬಂದು ಬೆಳೆದು ಉಪ-
ದೇಶಗೊಂಡು ಮಧ್ವಮತವ ಪೊಂದಿ
ಲೇಸಾಗಿ ಭಕ್ತಿವಿರಕ್ತಿಜ್ಞಾನದಿ ವಿ-
ಶೇಷನಾಗಿ ನಾ ಬಾಳುವುದೆಲ್ಲ| ದಾಸರ ಭಾಗ್ಯ

'ಶ್ರವಣ ಕೀರ್ತನ ವಂದನ ಸ್ತೋತ್ರ ಹರಿನಾಮ
ತವಕದಿಂದ ನುಡಿಯುವ ಕವನ
ನವನವ ವಚನವು ಮಂತ್ರಸಂಕಲ್ಪವು
ಸವಿದು ಸ್ಮರಿಸಿ ನಾ ಬಾಳುವುದೆಲ್ಲ| ದಾಸರ ಭಾಗ್ಯ

:: ಗೋವಿಂದ ನಿನ್ನಾನಂದ! ಸಾಧನ ಸಕಲವು ನಿನ್ನಾನಂದ! ::



ಗೋವಿಂದ ನಿನ್ನಾನಂದ!

ಸಾಧನಸಕಲವು ನಿನ್ನಾನಂದ!

'ಯಾತ್ರೆ ತೀರ್ಥ ದಿವ್ಯ ದಾನಧರ್ಮಂಗಳು
ಕ್ಷೇತ್ರ ಮೆಟ್ಟಿಬಹ ಸಂಭ್ರಮವು
ಮಿತ್ರರ ಕೂಡಾಡಿ ಹರಿಪರನೆಂದು ಸ-
ತ್ಪಾತ್ರನಾಗಿ ನಾ ಬಾಳುವುದೆಲ್ಲ| ದಾಸರ ಭಾಗ್ಯ

'ಹರಿದಿನದುಪವಾಸ ಜಾಗರ ಪಾರಣೆ
ಗುರುಹಿರಿಯರಲಿ ವಿಹಿತ ಸೇವೆ
ಹಿರಿದಾಗಿ ಮಾಡೋದು ಪರಿಪರಿಯಿಂದಲಿ
ಹರುಷದಿಂದಲಿ ನಲಿದಾಡುವುದೆಲ್ಲ| ದಾಸರ ಭಾಗ್ಯ

'ಷಡುರಸ ಭೋಜನ ದಿವ್ಯವಸನ ನಿತ್ಯ
ಉಡುವುದು ಹೊದೆವುದು ಹಸನಾಗಿ
ತಡೆಯದೆ ಜನರಿಂದ ಪೂಜೆಗೊಂಡು| ಸುಖ
ಬಡುತಲಿರುವ ವಿಚಿತ್ರಗಳೆಲ್ಲ| ದಾಸರ ಭಾಗ್ಯವಿದು"

ಎಂದು ಕುಣಿಯುತ್ತಾರೆ.

ಇಂದಮೇಲೆ ಶ್ರೀದಾಸರವರ ಮಹಿಮೆಯನ್ನು ವರ್ಣಿಸುವುದನ್ನು ನಾವು ಕೈಗೊಂಡರೆ ಅದು ಬಹು ಸಾಹಸವೇ ಸರಿ.

ಹೀಗೆಂದು ಸುಮ್ಮನಿರೋಣವೆಂದರೆ ಅದು ಒಳಿತಲ್ಲ. ಶ್ರೀ ಸುಮಧ್ವವಿಜಯಕಾರರು 'ಉತ್ತಮಶ್ಲೋಕಶಿಖಾಮಣೀನಾಂ ಮನೋವಿಶುದ್ಧೈ ಚರಿತಾನುವಾದಃ' ಎಂದಿದ್ದಾರೆ. ದೊಡ್ಡವರ ಚರಿತ್ರೆಯನ್ನು ಉಚ್ಚರಿಸುವುದರಿಂದ ಚಿತ್ತಶುದ್ಧಿಯಾಗುತ್ತದೆ ಎಂದಮೇಲೆ, ದೊಡ್ಡ ಜ್ಞಾನಿಗಳಾದ ಶ್ರೀ ದಾಸರಾಯರ ನೆನಪನ್ನಾದರೂ ತಂದುಕೊಳ್ಳಬೇಡವೆ? ಅಲ್ಲದೆ, ಯಾವ ವಿಶೇಷಣವೂ ಇಲ್ಲದೆ 'ಸೂತ್ರಗಳು' ಎಂದರೆ ಬ್ರಹ್ಮಸೂತ್ರಗಳೆಂದೂ ಯಾವ ವಿಶೇಷಣವಿಲ್ಲದ 'ವ್ಯಾಸ'ರೆಂದರೆ ಶ್ರೀ ಸತ್ಯವತೀಹೃದಯನಂದನರಾದ ಶ್ರೀ ಬಾದರಾಯಣರೆಂಬುದೂ ಹೇಗೆ ಸಿದ್ಧವೋ ಹಾಗೆ 'ದಾಸರೆಂದರೆ ಪುರಂದರದಾಸರಯ್ಯ' ಎಂದರು ಶ್ರೀ ವ್ಯಾಸರಾಯರು. ಅದರಲ್ಲಿ ಪುಷ್ಯಮಾಸದ ಅಮಾವಾಸ್ಯೆಯು ಈ ಮಹನೀಯ ದಾಸರಾಯರ ಪುಣ್ಯದಿನ. ಮದರಿಂದ ಶ್ರೀ ಪುರಂದರದಾಸರ ಬಗ್ಗೆ ಎಲ್ಲ ಹರಿದಾಸರೂ ಸವಿನೆನಪನ್ನು

ತಂದು ಭಕ್ತಿಯನ್ನು ಮಾಡಿ ವಿಶೇಷ ಅನುಗ್ರಹ ಸಂಪಾದಿಸಲಿ! ಚಿತ್ತಶುದ್ಧಿ ಮಾಡಿಕೊಳ್ಳೋಣ ಇನ್ನಷ್ಟು!

ದಾಸರು ಯಾರು? ಎಂಬುದು ಮೊಟ್ಟಮೊದಲ ತಿಳಿವು. ನಾರದರೇ ಅವತರಿಸಿದ್ದಾರೆಂದು ಶ್ರೀ ವಿಜಯದಾಸರಂತಹ ಆಪ್ತಶ್ರೇಷ್ಠರು

"ನಾರಜನಕನ ಸನ್ನಿಧಾನದಿ ಸಾರಗಾಯನ ಮಾಡುವ
ನಾರದರೆ ಈ ರೂಪದಿಂದಲಿ ಚಾರುದರುಶನ ತೋರಿದ" ಎಂದರು.

ಶ್ರೀ ದಾಸರವರ ಉದರಸಂಜಾತರಾದ ಶ್ರೀ ಗುರುಪುರಂದರದಾಸರವರು—

"ವ್ಯಾಸಮುನಿರಾಯರ ದಾಸರೊಳು ಪುರಂದರ-
ದಾಸರ ಮಹಿಮೆ ವರ್ಣಿಸಲಾರೆನವ್ವ ಪ.
'ಮೂರು ಲೋಕದ ಅರಸು ಮಾ ಭೂದುರ್ಗೆಯ ಸಹಿತ
ಧರಣಿಯ ಮೇಲೆ ದಯಮಾಡಿ ಬಂದು
ನಾರದರೆ ಇವರೆಂದು ಪುರಂದರದಾಸಂಗೆ
ಕಾರುಣ್ಯದಿಂದ ಕಾಣಿಸಿಕೊಂಡನವ್ವ" ೧

ಎಂದರು. ಶ್ರೀ ಗರುಡಪುರಾಣದಲ್ಲಿ ಶ್ರೀ ವ್ಯಾಸದೇವನೇ "ನಾರದೋ ವಿಷ್ಣು ಸೇವಾರ್ಥಂ ವಾಯ್ವಾವೇಶಯುತೋऽಜನಿ" ಎಂದು ಬರೆದಿದ್ದಾನೆ. ಇದಕ್ಕಿಂತ ಮತ್ತ್ಯಾವ ಪ್ರಮಾಣ!

ಶ್ರೀ ನಾರದರೇ ಮಹಾಮಹಿಮೋಪೇತ ಶ್ರೀ ದಾಸರಾಯರು. ಭಕ್ತಜನರ ಉದ್ಧಾರಕ್ಕಾಗಿ ಅವತರಿಸಿ ದೇಶದೇಶ ತಿರುಗಿ ಅಲ್ಲಲ್ಲಿದ್ದ ಅನೇಕ ಮಂದಿ ಸುಜೀವಿಗಳನ್ನು ಕಂಡುಹಿಡಿದು, ಕ್ಷಣಮಾತ್ರದಲ್ಲಿ ತಿದ್ದಿ, ಶುದ್ಧರನ್ನಾಗಿ ಮಾಡಿದ್ದರಿಂದ ಆ ಭಕ್ತವಂಶಗಳಲ್ಲಿ ಇಂದಿಗೂ—ಧರ್ಮ ನಾಶಕ್ಕೆ ಹೋರಾಡುತ್ತಿರುವ ಈ ಕಾಲದಲ್ಲೂ—ಧರ್ಮಾಚರಣೆಗೆ ಯಾವ ರೂಪದ ಅನುಕೂಲವಿರದ ದಿನಗಳಲ್ಲೂ ಶ್ರೀಹರಿನಾಮವನ್ನು ಅಂತರಂಗ ದಲ್ಲಾದರೂ ಅಂದುಕೊಂಡು, ಎಷ್ಟೋ ಪಾಪಫಲಾನುಭವದಿಂದ ದೂರಾಗುತ್ತಿದ್ದಾರೆ. ಶಾಸ್ತ್ರಗಳನ್ನು ಓದಿದವರು ಹೊಟ್ಟೆಗಿಲ್ಲದ ಕಾಲದಲ್ಲೂ ಶಾಸ್ತ್ರಸಮ್ಮತವಾದ ನಾಲ್ಕಾರು ಪ್ರಮೇಯಗಳನ್ನಾದರೂ ಶುದ್ಧವಾಗಿ ಮನನಮಾಡುತ್ತಿದ್ದಾರೆ. ಶ್ರೀ ದಾಸರಾಯರ—

"ಮಧ್ವಮತದ ಸಿದ್ಧಾಂತದ ಪದ್ಧತಿ ಬಿಡಬ್ಯಾಡಿ
ಬಿಡಬ್ಯಾಡಿ ಬಿಟ್ಟು ಕೆಡಬ್ಯಾಡಿ
ಹರಿಸರ್ವೋತ್ತಮನಹುದೆಂಬ ಜ್ಞಾನವ
ಅರಿತು ಬಾಳ್ವುದಕೆ ಪರತರ ಮತವಿದು—ಬಿಡಬ್ಯಾಡಿ||"

ಎಂದ ಮಾತನ್ನು ಕೇಳಿದಾಗಲಾದರೂ ನಾವು ಶ್ರೀತತ್ವವಾದ ಮತದಲ್ಲಿ ಜನ್ಮತಾಳಿದ್ದು ಸಾರ್ಥಕವಾಗಲಿಲ್ಲವಲ್ಲ ಎನ್ನಿಸುತ್ತೆ. ಮುಂದಾದರೂ ಶ್ರೀಮದಾನಂದತೀರ್ಥರು ನಮ್ಮನ್ನು ಶಾಸ್ತ್ರಜ್ಞಾನಿಗಳನ್ನಾಗಿ ಮಾಡುವರೇ! ಅನ್ನದ ಮಾಧ್ವನಿಲ್ಲ. ಜನ್ಮಾರಭ್ಯ ಶಾಸ್ತ್ರ ಓದಿದ ಗಣ್ಯಪಂಡಿತವರೇಣ್ಯ ರಾಗಿದ್ದರೂ ಶ್ರೀ ಜಗನ್ನಾಥದಾಸರವರು

"ದಾಸರಾಯ ಪ್ರತಿವಾಸರದಲಿ ಶ್ರೀನಿ-
ವಾಸನ ತೋರೋ ದಯಾಕರಮೂರುತಿ—ದಾಸರಾಯ"

ಎಂದು ಬೇಡಿಕೊಂಡಿದ್ದಾರೆ. ಇದನ್ನು ಮನದಟ್ಟುಮಾಡಿಕೊಡ ಲೋಸುಗವೇ ಶ್ರೀ ಜಗನ್ನಾಥದಾಸರಿಗಿಂತಲೂ ಮುಂಚೆಯೇ ಶ್ರೀ ವಿಜಯ ದಾಸರವರು ಪುರಂದರದಾಸರನ್ನು ಕೊಂಡಾಡುವಂತೆ ಶಿಷ್ಯರಿಗೆ ಹೇಳುತ್ತಾ

"ಸೀಮೆಯೊಳು ಪ್ರಾಕೃತದ ಗೀತೆಯಲಿ ಕೊಂಡಾಡಿ
ತಾಮಸರ ಸದೆಬಡೆದು ಮಧ್ವಸಿದ್ಧಾಂತದೊಳು
ಆ ಮಹಾಬಿರುದೆತ್ತಿ ಸಾರಿ ಡಂಗುರ ಹೊಯಿಸಿ
ಕಾಮನಯ್ಯನ ಕುಣಿಸುವ
ಶುದ್ಧ ಭಕುತಿಯಿಂದ ಸಿರಿವಿಠ್ಠಲನ ಸಿರಿಪಾದ
ಪದ್ಮಗಂಧವ ಮಧುಪನಂದದಲಿ ಸೇವಿಸುತ
ತಧ್ಧಿಮಿಾ ಧಿಮಿಕೆಂದು ಕುಣಿಸಿ ಕುಣಿದಾಡುತ್ತ
ಬುದ್ಧಿಪೂರ್ವಕದಿಂದಲಿ
ಶುದ್ಧಮಂದರಿಗೆಲ್ಲ ಎಂದೆಂದಿಗೂ ಬಿಡದೆ
ಹೊದ್ದಿದ್ದ ಪಾಪಗಳ ತಿರುಗಗೊಡದೆಲೆ ಕಾಲಿ-
ಲೊದ್ದು ಕಡೆಗೆ ನೂಕಿ ಸುಜ್ಞಾನ ಮಾರ್ಗದ-
ಪದ್ಧತಿಯ ಸ್ಥಿತಿ ಪೇಳಿದ"

ಎಂದು ಒತ್ತಿಹೇಳುತ್ತಾ ಆನಂದಬಾಷ್ಪದಿಂದ ತುಂಬಿದ ನಯನಾರವಿಂದ

ಉಳ್ಳವರಾಗಿ, ಶ್ರೀದಾಸರಾಯರ ಅನುಗ್ರಹವು ಎಂತಹ ಮೇಲ್ಮೆಯುಳ್ಳ ದೆಂದುಕೊಳ್ಳುತ್ತಾ—

"ದುರ್ಜನರ ಮಸ್ತಕಾದ್ರಿಗೆ ವಜ್ರಪ್ರಹರವಿದು
ಸಜ್ಜನರ ದಿವ್ಯ ಚರಣಾಬ್ಜಕ್ಕೆ ಭೃಂಗವಿದು
ನಿರ್ಜರರ ಮೆಚ್ಚು ಮೂರ್ಜಗದೊಳಗೆ ಬಲು ಹೆಚ್ಚು
ಲಜ್ಜೆಯನು ತೊರೆದು ನಿತ್ಯ
ಹೆಜ್ಜೆಹೆಜ್ಜೆಗೆ ಬಿಡದೆ ದಾಸರ ಕರುಣವೆಂಬ
ವಜ್ರ ಕವಚವ ತೊಟ್ಟು ನುಡಿದವನ ನುಡಿ ಸತ್ಯ
ಅರ್ಜುನಾಗ್ರಜ ಒಲಿದು ಸಾಗಿಸುವ ಕರುಣದಲಿ
ಅಬ್ಜ ಭವನೊಡನೆ ಗತಿಗೆ—ಎಂತು ವರ್ಣಿಸಲಿ ಎನಗಳವಲ್ಲ"

ಎಂದುಬಿಟ್ಟಿದ್ದಾರೆ.

ಇಂತಹ ಗುಣನಿಧಿ ಶ್ರೀದಾಸರವರ ಪುಣ್ಯದಿನವು ಈ ಪುಷ್ಯಮಾಸದ ಅಮಾವಾಸ್ಯೆ ಮಂಗಳವಾರ (ತಾ|| 6-2-1951). ಅವರ ಅನುಯಾಯಿ ಗಳಾದವರು ಕ್ರಮಬದ್ಧವಾಗಿ ಆ ಮಹಾತ್ಮರ ದಿವ್ಯದಿನವನ್ನು ಆಚರಿಸಿ ಇತೋಪ್ಯಧಿಕವಾಗಿ ಶ್ರೀದಾಸರಾಯರ ಅನುಗ್ರಹ ಪಡೆಯಲೆಂದು ಆಶಿಸು ತ್ತೇನೆ ಮತ್ತು ಅವರ ಉಗಾಭೋಗ ಒಂದನ್ನು ನಮ್ಮ ವಾಚಕವೃಂದಕ್ಕೆ ನೆನಪು ತರುತ್ತೇನೆ.

"ಹುಟ್ಟುವ ಭೀತಿ ಹೊಂದುವ ಭೀತಿ
ವಿಠ್ಠಲನಂಘ್ರಿಯ ನೆನೆಯದವಗೆ
ಕಾಲನಭೀತಿ ಕರ್ಮದಭೀತಿ ಗೋ-
ಪಾಲನ ದಾಸನಾಗದವನಿಗೆ
ಅರಿಷಡ್ವರ್ಗದ ಮಹಾಭೀತಿ ಶ್ರೀಹರಿನಾಮವನುಚ್ಚರಿಸದವಗೆ
ಹಲವು ಮಾತಿನ್ನೇನು ಹಲವುಭೀತಿ
ಚಲುವ ಪುರಂದರ ವಿಠಲನ್ನ ಪೂಜಿಸದವಗೆ"

ಶ್ರೀವಿಠ್ಠಲನ ಪೂಜೆ ಮಾಡುವಂತೆ ಶ್ರೀದಾಸರು ನಮಗೆ ಕರುಣಿಸಲಿ!
ಶ್ರೀಹರಿಯು ದಾಸರ ಕರುಣಾಕವಚವೆಮಗೆ ತೊಡಿಸಲಿ!!

ಲೇಖಾಂಕ—೧

ಶ್ರೀಹರಿದಾಸರುಗಳ ಕೃತಿಗಳಲ್ಲಿ ಶಾಸ್ತ್ರದೃಷ್ಟಿ

ಲೇಖಕರು:
ಶ್ರೀ ವರವಣಿ ರಾಮರಾವ್ ಬಿ. ಎ.

ಅಪರೋಕ್ಷಜ್ಞಾನಿಗಳಾದ ಶ್ರೀಹರಿದಾಸರ ಕೃತಿಗಳಲ್ಲಿ ಸಚ್ಛಾಸ್ತ್ರದ ಸಾರವೇ ಅಡಕವಾಗಿದೆಯೆಂದರೆ ಸ್ವಲ್ಪವೂ ಅತಿಶಯೋಕ್ತಿಯಾಗಲಾರದು. ಉಪನಿಷತ್ತುಗಳು, ಬ್ರಹ್ಮಸೂತ್ರ, ಭಗವದ್ಗೀತಾ, ಭಾಗವತ ಮುಂತಾದ ಸದಾಗಮಗಳಲ್ಲಿ ಪ್ರತಿಪಾದಿತವಾಗಿರತಕ್ಕ ಸತ್ತತ್ತ್ವಗಳನ್ನೇ ಹರಿದಾಸರುಗಳು ಸವಿಮಾತುಗಳಿಂದ ಸರಸವಾದ ಕನ್ನಡಭಾಷೆಯಲ್ಲಿ ಸಾರಿರುತ್ತಾರೆ ಹರಿದಾಸರ ವಾಣಿ ಶಾಸ್ತ್ರಾರ್ಥಗರ್ಭಿತವಾಣಿ. "ಅವರೆಂದ ವಚನಗಳೆಲ್ಲ ವೇದಾರ್ಥವಾಗಿ ಅವನಿಯೊಳ್ ತುಂಬಿದುವು| ಒಂದರೆ ಗ್ರಹಿಸಿದವರ ಭವರೋಗ ಭಸ್ಮವಾಗುವುದು" ಎಂಬುದಾಗಿ ಮಹಾನುಭಾವರಾದ ಶ್ರೀ ವಿಜಯದಾಸರು ಶ್ರೀ ಪುರಂದರದಾಸರಾಯರ ವಿಚಾರವಾಗಿ ನುಡಿದಿರತಕ್ಕ ಮಾತುಗಳೇ ಇದಕ್ಕೆ ಸಾಕ್ಷಿಯಾಗಿವೆ. ನಿಷ್ಕೃಷ್ಟವಾದ ಶಾಸ್ತ್ರಜ್ಞಾನವುಳ್ಳ ಪಂಡಿತರ ನಿರ್ಮತ್ಸರ ಬುದ್ಧಿಯಿಂದ ಹರಿದಾಸರ ಕೃತಿಗಳನ್ನು ಆಲೋಡನೆ ಮಾಡಿ ನೋಡಿದರೆ ಹರಿದಾಸರ ಪ್ರತಿಯೊಂದು ಮಾತಿಗೂ ಶ್ರುತಿಸ್ಮೃತಿಗಳಿಂದ ಸಮಾಖ್ಯೆಯು ಸಿಕ್ಕುತ್ತದೆ. ವಿಚಾರಪರರು ದಾಸ-ಸಾಹಿತ್ಯವನ್ನು ವಿಮರ್ಶೆ ಮಾಡಲು ಕುಳಿತರೆ, ಹರಿದಾಸರ ಜ್ಞಾನಸಂಪತ್ತು ಎಷ್ಟು ಅಗಾಧವಾದುದು ಮತ್ತು ಎಷ್ಟು ವಿಶ್ವತೋಮುಖವಾದುದು ಎಂಬುದು ಮನದಟ್ಟಾಗಿ ವಿಸ್ಮಯವಾಗುತ್ತದೆ. ಪ್ರಸ್ಥಾನತ್ರಯಗಳ ಜೊತೆಗೆ ಪಂಚರಾತ್ರ ಭಾರತ ಭಾಗವತಾದಿ ಪುರಾಣಗಳ ಜ್ಞಾನವೂ ಹರಿದಾಸರಿಗೆ ವಿಪುಲವಾಗಿದ್ದಿತೆಂಬುದಕ್ಕೆ ಯಥೇಷ್ಟವಾಗಿ ದೃಷ್ಟಾಂತಗಳು

ಸಿಕ್ಕುತ್ತವೆ. ಇಷ್ಟು ಮಾತ್ರವೇ ಅಲ್ಲ. ಭಾಷ್ಯ, ಟೀಕಾ ಮತ್ತು ಟಿಪ್ಪಣೀ ಗ್ರಂಥಗಳಲ್ಲಿಯೂ ಮತ್ತು ಮಾಸಮಾಹಾತ್ಮ್ಯಗಳೇ ಮುಂತಾದುವು ಗಳಲ್ಲಿಯೂ ಅವರು ಎಷ್ಟು ನಿಷ್ಣಾತರಾಗಿದ್ದರೆಂಬುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಒಟ್ಟಿನಲ್ಲಿ ಹರಿದಾಸರ ಜ್ಞಾನಭಂಡಾರವು ಅಕ್ಷಯ ವಾದುದು. ಆದುದರಿಂದಲೇ "ಸುಧಾ ಓದಿದ ನಂತರ ಪದ ಓದು" ಎಂಬ ನಾಣ್ಣುಡಿಯು ಬಂದಿರುವುದು.

ಶ್ರೀಮದಾನಂದತೀರ್ಥರ ಪೀಠಪರಂಪರೆಗಳಲ್ಲಿ ಬಂದು, ಭಾಷ್ಯಾದಿ ಗ್ರಂಥಗಳಿಗೆ ವ್ಯಾಖ್ಯಾನ ಮಾಡಿ ಸುಪ್ರಸಿದ್ಧ ವ್ಯಾಖ್ಯಾತೃಗಳೆನಿಸಿ, ಕನ್ನಡ ದಲ್ಲಿಯೂ ದೇವರನಾಮಗಳು, ಸುಳಾದಿಗಳು ಮುಂತಾದುವನ್ನು ರಚನೆ ಮಾಡಿ ದಾಸಕೂಟಪರಂಪರೆಗೆ ತೇಜಸ್ಸನ್ನೂ ಗೌರವವನ್ನೂ ಸಂಪಾದಿಸಿ ಕೊಟ್ಟ ಮಹಾನುಭಾವರುಗಳಾದ ಶ್ರೀ ನರಹರಿತೀರ್ಥರು, ಶ್ರೀ ಶ್ರೀಪಾದ-ರಾಜರು, ಶ್ರೀ ವ್ಯಾಸರಾಯರು, ಶ್ರೀ ವಾದಿರಾಜರು ಮುಂತಾದವರು ಪ್ರತಿವಾದಿನಿಗ್ರಹಪೂರ್ವಕ ಸಿದ್ಧಾಂತಸ್ಥಾಪನಮಾಡಿ ಮಧ್ವಮತ ಪ್ರಚಾರ ಮಾಡಿದವರೆಂಬುದು ನಿರ್ವಿವಾದವಾಗಿರುವುದರಿಂದ, ಅವರಿಂದ ರಚಿತ ವಾಗಿರತಕ್ಕ ಕನ್ನಡ ಕೃತಿಗಳಾದರೂ ಶಾಸ್ತ್ರಸಮ್ಮತವಾದುವುಗಳೇ ಎಂಬುದು ಸ್ವತಸ್ಸಿದ್ಧವಾಗಿ ಏರ್ಪಡುತ್ತದೆ. ಇನ್ನು ಶ್ರೀ ಪುರಂದರದಾಸ ರಿಂದ ಹಿಡಿದು ಅವರ ಪರಂಪರೆಯಲ್ಲಿ ಬಂದ ಅಪರೋಕ್ಷಜ್ಞಾನಿಗಳ ವಿಷಯದಲ್ಲಿ ಅವರು ಶಾಸ್ತ್ರವನ್ನು ಎಷ್ಟರಮಟ್ಟಿಗೆ ಶೋಧಿಸಿದ್ದರು, ಶಾಸ್ತ್ರದಲ್ಲಿ ಅವರಿಗೆ ಎಂಥ ದೀಕ್ಷೆಯಿದ್ದಿತು ಮತ್ತು ಶಾಸ್ತ್ರಸಿದ್ಧಾಂತ ಗಳನ್ನು ಪ್ರಚಾರ ಮಾಡುವುದರಲ್ಲಿ ಅವರಿಗೆ ಎಷ್ಟು ಆಕಾಂಕ್ಷೆಯಿದ್ದಿತು ಎಂಬುದಕ್ಕೆ ಅವರ ಅಮೋಘವಾದ ಕೃತಿಗಳೇ ನಿದರ್ಶನಗಳಾಗಿವೆ.

ಶ್ರೀ ಪುರಂದರದಾಸರು, ವ್ಯಾಸತ್ರಯಗಳೆಂದು ಪ್ರಸಿದ್ಧವಾದ ಪ್ರೌಢವಾಕ್ಯಾರ್ಥಗ್ರಂಥಗಳನ್ನು ರಚನೆಮಾಡಿದ ಶ್ರೀ ವ್ಯಾಸರಾಯರವರ ಸಾಕ್ಷಾತ್ ಶಿಷ್ಯರು. ಅವರಿಂದ ಜ್ಞಾನೋಪದೇಶವನ್ನೂ ದಾಸಕೂಟದ ದೀಕ್ಷೆಯನ್ನೂ ಅಂಕಿತವನ್ನೂ ಪಡೆದವರು. "ವ್ಯಾಸರಾಯರಿಂದ ಭಾಸುರ ಮಂತ್ರೋಪದೇಶವ ಪಡೆದು ರಮೇಶನನೊಲಿಸಿದ ದಾಸರಾಯ" ಎಂಬುದಾಗಿ ಶ್ರೀ ಜಗನ್ನಾಥದಾಸರು ತಾವು ಮಾಡಿರತಕ್ಕ ದಾಸರಾಯರ

ಸ್ತೋತ್ರದಲ್ಲಿ ಹೇಳಿರುತ್ತಾರೆ. ಶ್ರೀ ಪುರಂದರದಾಸರೇ ಶ್ರೀ ವ್ಯಾಸರಾಯರ ಸುಳಾದಿಯಲ್ಲಿ "ವ್ಯಾಸರಾಯರ ಚರಣಕಮಲದರುಶನವೆನಗೆ ಏಸು ಜನ್ಮದ ಸುಕೃತ ಫಲದಿ ದೊರಕಿತೋ ಎನ್ನ ಸಾಸಿರ ಕುಲಕೋಟಿ ಪಾವನ ವಾಯಿತು ಶ್ರೀಶನ ಭಜಿಸುವುದಕ್ಕಧಿಕಾರಿ ನಾನಾದೆ" ಎಂದೂ "ಗುರು ವ್ಯಾಸರಾಯರೆ ಕರುಣದಿಂದೆನಗೆ ವರಮಹಾಮಂತ್ರಗಳ ಉಪದೇಶಿಸಿದರು ಪುರಂದರವಿಠಲನೆ ಪರನೆಂದರುಹಿ ದುರಿತಭಯವನೆಲ್ಲ ಪರಿಹರಿಸಿದರಾಗಿ" "ಅಂಕಿತವಿಲ್ಲದ ದೇಹ ನಿಷಿದ್ಧ| ಅಂಕಿತವಿಲ್ಲದ ಕಾವ್ಯ ಶೋಭಿಸದು| ಅಂಕಿತವಿಲ್ಲದಿರಬಾರದು ಎಂದು| ಪಂಕಜನಾಭ ಶ್ರೀ ಪುರಂದರವಿಠಲನ| ಅಂಕಿತವೆನಗಿತ್ತ ಗುರು ವ್ಯಾಸಮುನಿರಾಯ" ಎಂದೂ ಹೇಳಿರುತ್ತಾರೆ. ಶ್ರೀ ವ್ಯಾಸರಾಯರು ತಮ್ಮ ಪ್ರಿಯಶಿಷ್ಯರಾದ ಶ್ರೀ ಪುರಂದರದಾಸರನ್ನು ಶ್ಲಾಘಿಸುವುದರಲ್ಲಿ "ನೀತಿಯಲ್ಲವನರಿತು ನಿಗಮವೇದ್ಯನ ನಿತ್ಯವಾತಸುತ ನಲ್ಲಿಹನ ವರ್ಣಿಸುತಲಿ| ಗೀತನರ್ತನದಿಂದ ಕೃಷ್ಣನ್ನ ಪೂಜಿಸುವ ಪೂತಾತ್ಮ ಪುರಂದರದಾಸರಿವರಯ್ಯ—ದಾಸರೆಂದರೆ ಪುರಂದರದಾಸರಯ್ಯ" ಎಂಬುದಾಗಿ ಉದ್ಘೋಷಿಸಿರುತ್ತಾರೆ. ಅಲ್ಲದೆ ದಾಸರಾಯರ ಕೃತಿಗಳನ್ನು "ಪುರಂದರೋಪನಿಷತ್" ಎಂಬುದಾಗಿ ವಿದ್ವಾಂಸರ ಸಭೆಯಲ್ಲಿ ಸಂಬೋಧಿಸಿ ಅಸಾಧಾರಣ ಗೌರವವನ್ನು ಕೊಟ್ಟಿರುತ್ತಾರೆ. ಇಂಥ ಶ್ರೀ ಪುರಂದರದಾಸರು "ಬುದ್ಧಿಯಲಿ ತನುಮನವ ತಿದ್ದಿಕೊಳ್ಳಲಿಬೇಕು| ಮುದ್ದಾಗಿ ಇರಬೇಕು ಮುನಿಯೋಗಿಗಳಿಗೆ|| ಮಧ್ವಮತಾಬ್ಧಿಯಲಿ ಮೀನಾಗಿರಲಿಬೇಕು| ಶುದ್ಧನಾಗಿ ತತ್ತ್ವ ಶೋಧಿಸಲಿಬೇಕು—ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ" ಎಂಬುದಾಗಿ ಸಾರಿರುತ್ತಾರೆ. ಅಲ್ಲದೆ "ಮಧ್ವಮತದ ಸಿದ್ಧಾಂತದ ಪದ್ಧತಿ ಬಿಡಬೇಡಿ ಬಿಡಬೇಡಿ ಬಿಟ್ಟು ನೀವು ಕೆಡಬೇಡಿ" ಎಂದು ಮುಕ್ತಕಂಠದಿಂದ ನುಡಿದಿರುತ್ತಾರೆ. "ಸತ್ಯಂ ಜಗತಿದು ಪಂಚಭೇದವು ನಿತ್ಯ ಶ್ರೀಗೋವಿಂದನ ಕೃತ್ಯ ತಿಳಿದು ತಾರತಮ್ಯದಿ ಕೃಷ್ಣನಧಿಕನೆಂದು ಸಾರಿರೈ" ಎಂಬ ಮಧ್ವಸಿದ್ಧಾಂತದ ಸಾರವನ್ನೇ ಸಾರಿರುತ್ತಾರೆ. ಇದರಿಂದ ಅವರ ತತ್ತ್ವದಾರ್ಢ್ಯವೂ, ಸತ್ತತ್ತ್ವವನ್ನು ಸಜ್ಜನರಿಗೆ ಉಪದೇಶಿಸಬೇಕೆಂಬ ಅವರ ತೀವ್ರಾಸಕ್ತಿಯೂ ವ್ಯಕ್ತಪಡುತ್ತವೆ.

ಶ್ರೀ ವಿಜಯದಾಸರ ವಿಷಯವನ್ನು ತೆಗೆದುಕೊಳ್ಳೋಣ. ಶ್ರೀ ಜಗನ್ನಾಥದಾಸರು ಶ್ರೀ ವಿಜಯದಾಸರನ್ನು ಸ್ತೋತ್ರಮಾಡತಕ್ಕ ಸಂದರ್ಭದಲ್ಲಿ "ಶೋಧಿಸಿ ಗ್ರಂಥಗಳ—ಸುಳಾದಿಯ ಮೋದದಿಂದಲಿ ಬಹಳ ಕವಿತೆ ಮಾಡಿ ಸಾಧುಜನಕೆ ಸಕಲ ಆನಂದವಿತ್ತು—ವಾದಿ ಜನರನು ಗೆದ್ದು ವಾದಿಸಿ ಮಾಧವ ಜಗನ್ನಾಥವಿಠಲನ ಪಾದಕಮಲಕೆ ಮಧುಪನಂದದಿ ಸಾದರದಿ ತೋರಿಸುತ ಮೆರೆಯುವ ರತುನ ದೊರಕಿತಲ್ಲ" ಎಂದಿದ್ದಾರೆ. ಅಲ್ಲದೆ ಶ್ರೀ ವಿಜಯರಾಯರು ಪರಂಧಾಮವನ್ನೈದಿದ ಕಾಲದಲ್ಲಿ ಶ್ರೀಜಗನ್ನಾಥದಾಸರು ರಚಿಸಿದ ಕೃತಿಯಲ್ಲಿ ಅವರು "ಸುಖತೀರ್ಥ ಮುನಿಯ ಮನಕನುಕೂಲ ಸಚ್ಛಾಸ್ತ್ರನಿಕರಗಳ ಕವನರೂಪದಲಿ ರಚಿಸಿ| ಭಕುತರ್ಗೆ ಸನ್ಮಾರ್ಗ ತೋರಿ ಸಂತೋಷದಲಿ| ವಿಖನಸಾರ್ಚಿತ ಜಗನ್ನಾಥ ವಿಠ್ಠಲನ ಪದಕೆ| ತೆರಳಿದರು ವಿಜಯರಾಯರು" ಎಂಬುದಾಗಿ ನಿರೂಪಿಸಿರುತ್ತಾರೆ. 'ಭಕ್ತಿಯಲಿ ಭಾಗಣ್ಣ'ನೆಂದು ಖ್ಯಾತರಾದ ಶ್ರೀ ಗೋಪಾಲದಾಸರು, "ಮಧ್ವಮತದ ಸಾರ ಕವನದಿ ರಚಿಸಿದ್ಯೊ ವಿಜಯರಾಯ.... ಶುದ್ಧತತ್ವಸಾರ ಸುಳಾದಿಪದಮಾಡಿ ವಿಜಯರಾಯ—ಹೃದ್ಯದಿ ಧಿಮಿಕೆಂದು ಹರಿಯ ಕುಣಿಸಿದ್ಯೊ ವಿಜಯರಾಯ—ಭಕ್ತಜನರಿಗೆ ತತ್ತ್ವೋಪದೇಶ ಮಾಡಿ ವಿಜಯರಾಯ" ಎಂಬುದಾಗಿ ಶ್ರೀ ವಿಜಯರಾಯರ ಜ್ಞಾನಭಕ್ತಿ-ಸಂಪತ್ತನ್ನು ವ್ಯಕ್ತಪಡಿಸಿರುತ್ತಾರೆ. ಶ್ರೀ ವಿಜಯರಾಯರು "ಮಧ್ವಶಾಸ್ತ್ರಪ್ರವಚನ—ಮುದ್ದುಕೃಷ್ಣನ ದರ್ಶನ—ಶುದ್ಧ ವಿಜಯವಿಠ್ಠಲನ ಪೊದ್ದಿ ಕೊಂಡಾಡುವವಗೆ ಆನಂದ ಆನಂದ ಮತ್ತೆ ಪರಮಾನಂದ" ಎಂದು ಭಕ್ತಿಪರವಶರಾಗಿ ಹಾಡಿದ್ದಾರೆ. "ಶ್ರುತಿಗೆ ಅಪ್ರಾಮಾಣ್ಯ ಬಾರದಂತೆ| ಮಧ್ವಮತಕೆ ವಿರೋಧವಾಗದಂತೆ| ಕ್ಷಿತಿಯೊಳಗೆ ಸುಜನರಿಗೆ ಹಿತವಾಗುವಂತೆ ಶ್ರೀಪತಿಯ ಸೇವಿಸಿ ಸುಗತಿ ಪಡೆಯೋ ಪ್ರಾಣಿ" ಎಂಬುದಾಗಿ ಅವರು ಉಪದೇಶಿಸಿರುತ್ತಾರೆ ಶ್ರೀ ಗೋಪಾಲದಾಸರ ಉಪದೇಶವು ಈ ರೀತಿ ಇದೆ: "ವಿಷಯದಲಿ ಮನ ಸನ್ನಿಕರ್ಷವಾದರೆ ವಶಕೆ ಬರಲರಿಯದಯ್ಯ, ಎಸೆವ ಶ್ರುತಿಸ್ಮೃತಿಯೆಂಬ ನಿಶಾಣದಲಿ ಮಸೆಮಸೆದು ವಶಮಾಡಿಕೋ ಬಿಡದಲೇ ಮನುಜ.......ವಿವಿಧ ಸಾಂಸಾರಿಕ ದುಃಖದರುಶನವಾಗೆ, ಶ್ರವಣೀಯ ಶಾಸ್ತ್ರಂಗಳ ಹವಣವರಿತು

ಜ್ಞಾನದ್ರವಿಣದಿಂದಲಿ ಕೇಳಿಕೊ ಭವಣೆದೂರಾಗುವುದೊ ಮನುಜ."

ಐಜಿ ಸ್ವಾಮಿಗಳೆಂದು ಪ್ರಸಿದ್ಧರಾದ ಶ್ರೀ ವ್ಯಾಸತತ್ತ್ವಜ್ಞರ ಅಮೋಘ ವಾಕ್ಯವಿದು:—

"ಜ್ಞಾನಪುಟ್ಟುವಂತೆ ಪ್ರವಚನ ಮಾಡಿಸೊ| ಹೀನ ಉಕುತಿಗಳ ಖಂಡನೆ ಮಾಡಿಸೊ| ದೀನವತ್ಸಲ ವಾಸುದೇವ ವಿಠಲರೇಯ"

ಇದರಂತೆ ಶ್ರೀಹರಿದಾಸವರ್ಯರುಗಳ ಹಿತನುಡಿಗಳು ಅನೇಕವಾಗಿವೆ. ಗ್ರಂಥವಿಸ್ತರಭೀತಿಯಿಂದ ಅವುಗಳೆಲ್ಲವನ್ನೂ ಇಲ್ಲಿ ಉದಹರಿಸಲು ಸಾಧ್ಯವಿಲ್ಲ. ಒಟ್ಟಿನಲ್ಲಿ ಹರಿದಾಸರುಗಳು ಶಾಸ್ತ್ರಪರಾಮರ್ಶೆಯಲ್ಲಿ ದೃಷ್ಟಿಯುಳ್ಳವರಾಗಿ ಕೃತಿರಚನೆಮಾಡಿ ಲೋಕೋಪಕಾರ ಮಾಡಿರುತ್ತಾರೆಂಬುದು ಮನವರಿಕೆಯಾಗುವುದಕ್ಕಾಗಿ ದಿಗ್ದರ್ಶನಾರ್ಥವಾಗಿ ಹರಿದಾಸರ ಕೆಲವು ವಾಕ್ಯಗಳನ್ನು ಈ ಲೇಖನದಲ್ಲಿ ಉದಹರಿಸಲಾಗಿದೆ.

***

ಉಗಾಭೋಗ

ಎನ್ನ ಕಡೆಹಾಯಿಸುವುದು ನಿನ್ನ ವ್ಯಾಪಾರ
ನಿನ್ನ ನೆನೆಯುತಲಿಹುದು ಎನ್ನ ವ್ಯಾಪಾರ
ಎನ್ನ ಸತಿಸುತರಿಗೆ ನೀನೇ ಗತಿ
ನಿನ್ನನೊಪ್ಪಿಸುವುದು ಎನ್ನ ನೀತಿ
ಎನ್ನ ಪಡಿಯಿಕ್ಕಿ ಸಲಹುವುದು ನಿನ್ನ ಧರ್ಮ
ನಿನ್ನ ಅಡಿಗೆರಗುವುದು ಎನ್ನ ಕರ್ಮ
ಎನ್ನ ತಪ್ಪುಗಳ ಎಣಿಸುವುದು ನಿನ್ನದಲ್ಲ
ನಿನ್ನ ಮರೆದು ಬದುಕುವುದು ಎನ್ನದಲ್ಲ
ನೀನಲ್ಲದಿನ್ನಾರಿಗೆ ಮೊರೆಯಿಡುವೆ ಪುರಂದರವಿಠ್ಠಲ

ಪುರುಷಾರ್ಥ

ಎಲ್ಲರೂ ಸುಖವನ್ನು ಬಯಸುವರು. ಇಚ್ಛಿತ ವಿಷಯಭೋಗದಿಂದ ಸುಖವಾಗುವುದೆಂದು ಎಲ್ಲರೂ ಬಲ್ಲರು. ಈ ಸುಖಾನುಭವವು ಕ್ಷಣಿಕ ವೆಂಬುದೂ ಸರ್ವಾನುಭವಸಿದ್ಧವಾಗಿದೆ. ಹೀಗಿದ್ದರೂ ಅನ್ಯಮಾರ್ಗದಿಂದ ಸುಖವನ್ನು ಹೊಂದಬಹುದೋ ಮತ್ತು ದುಃಖಮಿಶ್ರವಲ್ಲದ ನಿತ್ಯಸುಖವು ಲಭಿಸಬಹುದೋ ಎಂಬುದನ್ನು ಪರಿಶೀಲಿಸಿದರೆ, ಅದಕ್ಕೆ ಅವಕಾಶವಿಲ್ಲ ವೆಂದು ಸಿದ್ಧವಾಗುತ್ತದೆ. ನಿರ್ದುಃಖವಾದ ನಿತ್ಯಸುಖಾನುಭವವು ಕೇವಲ ಬಿಸಿಲುಕುದುರೆಯಲ್ಲದೇ ಸತ್ಯವಾದುದಲ್ಲ. ಆದ್ದರಿಂದ ಭೋಗ್ಯ ವಸ್ತುಗಳನ್ನು ಯಥೇಷ್ಟವಾಗಿ ದೊರಕಿಸಿಕೊಂಡು ಭೋಗಿಸುವುದೇ ಪುರುಷಾರ್ಥವು. ಅದಕ್ಕಾಗಿಯೇ ಸರ್ವರೂ ಯತ್ನಿಸಬೇಕು. ಈ ದೇಹವು ನಷ್ಟವಾದ ಮೇಲೆ ಸುಖಾನುಭವಕ್ಕೆ ಅವಕಾಶವಿಲ್ಲ; ಅನುಭವಿಸು ವವನೂ ಇಲ್ಲ. ನಿತ್ಯಾನಂದದ ಕಲ್ಪನೆಯಿಂದ ಭ್ರಮೆಗೊಂಡು, ದೇಹ ಭಿನ್ನನಾದ ಚೇತನನ್ನೂ, ಆತನಿಗೊಂದು ನಿತ್ಯಸ್ವರೂಪವನ್ನೂ ಅಂಗೀಕರಿಸಿ, ಪ್ರತ್ಯಕ್ಷಸಿದ್ಧವಾದ ಅನಂತ ದೇಹಗಳಲ್ಲಿ ಅನಂತ ಚೇತನರಿರುವರೆಂದೂ, ಅವರೆಲ್ಲರಿಗೆ ಸ್ವಾಮಿಯಾದ ಒಬ್ಬ ಪರಮಚೇತನನಿರುವನೆಂದೂ, ಆತ ನಿಂದಲೇ ಸಕಲ ಜಗದ್ವ್ಯಾಪಾರಗಳೂ ನಡೆಯುವುವೆಂದೂ ತಿಳಿದು, ಚೇತನನಿಗೆ ದೇಹಾಂತರಗಳ ಪ್ರಾಪ್ತಿಯನ್ನೂ, ಪರಲೋಕಗಳನ್ನೂ, ಧರ್ಮಾಧರ್ಮಗಳನ್ನೂ ಒಪ್ಪಿ, ದೇಹವನ್ನು ದಂಡಿಸಿ, ಭೋಗವನ್ನು ಪರಿತ್ಯಾಗ ಮಾಡುವುದು, ವಿಚಾರಶೀಲನಾದ ಮಾನವನಿಗೆ ಶೋಭಿಸದು. ದೇಶಕಾಲಪರಿಸ್ಥಿತಿಗಳನ್ನೆದುರಿಸಿ, ಕಷ್ಟದಿಂದ ಯತ್ನಿಸಿ, ಸುಖಸಾಮಗ್ರಿ

ಗಳನ್ನು ದೊರಕಿಸಿಕೊಳ್ಳಲಾರದ ಮೂಢನಾದ ಹೇಡಿಮಾನವನ ಕುತ್ಸಿತ ವಿಚಾರಗಳಿವು. ಧೀರನಾದವನು ಈ ಕುಕಲ್ಪನೆಗಳನ್ನು ಕಿತ್ತೊಗೆದು, ತನ್ನ ಬುದ್ಧಿಬಲವನ್ನೂ, ಕಾರ್ಯಶಕ್ತಿಯನ್ನೂ ಅಭಿವೃದ್ಧಿಗೊಳಿಸಿಕೊಂಡು, ಉತ್ಸಾಹದಿಂದ ದುಡಿಯಬೇಕು. ಹೀಗೆಂಬ ಮುಂತಾದ ವಾದಸರಣಿಯು ನಾಸ್ತಿಕನದು.

ಸದ್ಯಃಕಾಲದ ನಾಗರಿಕ ಲೋಕವೂ ಇದೇ ನಾಸ್ತಿಕವಾದವನ್ನು ಅವಲಂಬಿಸಿದ್ದರೂ, ಸ್ವಾತ್ಮವಿವಂಚನೆಗೊಳಗಾಗಿ, ತಾವು ನಾಸ್ತಿಕರೆಲ್ಲ ವೆಂದೂ ಇಡೀ ಜಗತ್ತಿನ ಸುಖ ಶಾಂತಿಗಳಿಗಾಗಿ ದುಡಿಯುತ್ತಾ, ಸತ್ಯಾನ್ವೇಷಣದಲ್ಲಿ ತೊಡಗಿದವರೆಂದೂ ಹೇಳಿಕೊಳ್ಳುತ್ತಾರೆ. ನಾಸ್ತಿಕ ತತ್ವಾವಲಂಬನದಿಂದ, ಭೋಗಸಾಮುಗ್ರಿಗಳಾದ ಹೊನ್ನು, ಹೆಣ್ಣು, ಮಣ್ಣುಗಳ ಸಂಪಾದನೆಗಾಗಿ ಬಲಿಷ್ಠರು ಸ್ವಾರ್ಥಿಗಳಾಗಿ ದುರ್ಬಲರನ್ನು ಹಿಂಸಿಸುವುದರ ಮೂಲಕ, ಲೋಕಹಿತಕ್ಕೆ ಪ್ರತಿಯಾಗಿ ಪರಪೀಡೆಯೇ ಮೊದಲಾದ ಅನರ್ಥಗಳು ಅನಿವಾರ್ಯವಾಗುತ್ತವೆ. ಆದರೆ ನಾವು ದುರ್ಬಲರನ್ನು ರಕ್ಷಿಸುತ್ತೇವೆ. ಮಾನವನ ಮೂಲಭೂತವಾದ ಹಕ್ಕು ಗಳನ್ನು ಗೌರವಿಸುತ್ತೇವೆ. ನೈತಿಕ ನಿಯಮಗಳ ಪಾಲನೆಯು ಸಕಲರ ಪ್ರಥಮಕರ್ತವ್ಯವೆಂಬುದನ್ನು ಅರಿತಿದ್ದೇವೆ. ಅದಕ್ಕಾಗಿ ಶಾಸನಸಭೆ ಗಳನ್ನೇರ್ಪಡಿಸಿದ್ದೇವೆ. ಸತ್ಯಾನ್ವೇಷಣವೇ ಮಾನವನ ಸಕಲ ಯತ್ನಗಳ ಗುರಿಯೆಂದರಿತಿದ್ದೇವೆ ಎಂದು ಮುಂತಾಗಿ ಮೋಹಕವಾದಗಳನ್ನು ಮುಂದಿಡುತ್ತಾರೆ. ಆದರೆ ಈ ಉಭಯರ ತತ್ವತಃ ಭೇದವಿಲ್ಲ ದುರ್ಬಲರ ರಕ್ಷಣೆಯೆಂಬುದು ಸೋಗು; ಸ್ವಾರ್ಥವೇ ಅಂತರಂಗದ ಗುರಿ. ಎಲ್ಲಿ ನೋಡಿದರೂ ಬಲಿಷ್ಠರ ಆಕ್ರಮಣವು ಯಥೇಚ್ಛೆಯಾಗಿ ನಡೆದಿದೆ. ದುರ್ಬಲರೆಂಬುವರು ಅನ್ಯವಶರಾಗದೇ ತಮ್ಮ ಅಂಕೆಯಲ್ಲಿರಬೇಕೆಂಬುದು ಇವರ ರಕ್ಷಣಾಸೋಗಿನ ಮರ್ಮ. ದುರ್ಬಲ ಪಂಗಡಗಳು ಏಕೀಭವಿಸಿ ಸ್ವತಂತ್ರರಾಗಿ ಆತ್ಮರಕ್ಷಣೆಯಲ್ಲಿ ದಕ್ಷರಾಗುವಂತೆ ಅವರ ಉದ್ಧಾರಕ್ಕಾಗಿ ದುಡಿಯುವೆವೆಂದು ಘೋಷಿಸುವ ಮುಖಂಡರ ಇಂಗಿತವಾದರೂ ಇದೇ ಆಗಿದೆ. ನೀತಿ ನಿಯಮಗಳೆಲ್ಲ ಕೇವಲ ವಾಕ್ಯಾಡಂಬರದಲ್ಲಿ ಪರ್ಯವಸಾನ ವಾಗುತ್ತಿವೆ. ನೈತಿಕ ಮಟ್ಟವನ್ನೆತ್ತಲು ಸಾಧಕವಾದ ಯಾವ ಪ್ರಯತ್ನ

ಗಳೂ ಎಲ್ಲಿಯೂ ನಡೆದಿರುವುದಿಲ್ಲ. ಶಾಸನಸಭೆಗಳು ಪ್ರತಿದಿನವೂ ಹೊಸ ಹೊಸ ಕಾನೂನುಗಳನ್ನು ರಚಿಸಿದರೂ, ವಿಧಾಯಕವಾದ ದಂಡನೆಗೆ ಸಿಕ್ಕದಂತೆ ಅವುಗಳನ್ನು ಉಲ್ಲಂಘಿಸುವ ಮಾರ್ಗವನ್ನು ಹುಡುಕುವುದೇ ಪ್ರತಿಯೊಬ್ಬ ಪ್ರಜೆಯ ಯತ್ನವಾಗಿದೆ. ಇನ್ನು, ಸತ್ಯಾನ್ವೇಷಣಕ್ಕಾಗಿ ನಡೆದಿರುವುದೇನು? ವಿಜ್ಞಾನಶಾಸ್ತ್ರದ ಪ್ರಭಾವ ಮತ್ತು ನೂತನ ಶೋಧಗಳು! ಅಗಾಧವಾದ ಪ್ರಾಕೃತಶಕ್ತಿಗಳ ವಶೀಕರಣದಿಂದ, ವಿವಿಧ ಭೋಗ ಸಾಮಗ್ರಿಗಳ ನಿರ್ಮಾಣವೂ, ಪ್ರಯಾಣ ಸೌಕರ್ಯಗಳೂ, ದೂರಶ್ರವಣ, ದೂರದರ್ಶನ, ಮುಂತಾದ ಸೌಲಭ್ಯಗಳೂ ದೊರೆತಿರುವುದು ನಿಜ. ಇವುಗಳೊಂದಿಗೆ ವಿನಾಶಕಾರಕ ಅಸ್ತ್ರಗಳೂ (ಅಣುಬಾಂಬು ಮೊದಲಾದುವುಗಳೂ) ಸಿದ್ಧವಾಗಿವೆ. ಆದರೆ ಇವುಗಳೆಲ್ಲವೂ ಮಾನವನ ಸುಖವನ್ನು ಸಾಧಿಸಿವೆಯೇ? ಯಂತ್ರವಿಶೇಷಗಳಲ್ಲಿ ಕೂತು ಲೋಕಾಂತರಗಳಿಗೆ ಪ್ರಯಾಣ ಮಾಡುವುದರಿಂದ ಯಾವ ಸುಖವನ್ನು ಸಾಧಿಸಬಹುದೆಂದು ಮಾನವನು ತಿಳಿದಿರುವನು? ಇವೆಲ್ಲವುಗಳ ಧ್ಯೇಯವು ವಿಷಯಭೋಗದಿಂದಲೇ ಸುಖವನ್ನು ಹೊಂದಬಹುದೆಂಬ ತತ್ವದಿಂದ ಭಿನ್ನವೇ? ಸರ್ವಥಾ ಅಲ್ಲವೆಂಬುದು ಅತಿ ಸ್ಪಷ್ಟವಿದೆ.

ಸುಖವು ಲಭಿಸುವುದೆಂಬ ಭ್ರಮೆಯಿಂದ ವಿಷಯಗಳ ಕಡೆಗೆ ಧಾವಿಸುವ ಮೊದಲು ಸುಖದುಃಖಗಳೆಂಬ ಅನುಭವವು ಹೇಗೆ ಉಂಟಾಗುವುವೆಂಬುದನ್ನು ಸಾವಧಾನದಿಂದ ವಿಮರ್ಶಿಸುವುದೊಳಿತು. ಇಂದ್ರಿಯಗಳಿಗೂ ವಿಷಯಗಳಿಗೂ ಸಂಪರ್ಕವಾಗುವ ಮಾತ್ರದಿಂದ ಸುಖದುಃಖಗಳಾಗುವುವೇ? ಇಲ್ಲ. ಯಾವುದೊಂದು ದೃಶ್ಯವನ್ನು ಕಣ್ಣಿನಿಂದ ನೋಡಿದ ಮಾತ್ರಕ್ಕೆ, ಸುಖವಾಗಲಿ ದುಃಖವಾಗಲಿ ಎಲ್ಲರಿಗೂ ಏಕ-ಪ್ರಕಾರವಾದ ಅನುಭವವುಂಟಾಗುವುದಿಲ್ಲ. ಒಬ್ಬನ ಶಿರಚ್ಛೇದನ ದೃಶ್ಯವನ್ನು ಕಂಡರೆ ಮಿತ್ರನಿಗೆ ದುಃಖವೂ, ಶತ್ರುವಿಗೆ ಸಂತೋಷವೂ ಆಗುತ್ತದೆ. ಈರುಳ್ಳಿಯನ್ನು ನಾಲಿಗೆಯ ಮೇಲಿಟ್ಟರೆ ಒಬ್ಬನಿಗೆ ವಾಂತಿಯಾಗುತ್ತದೆ, ಮತ್ತೊಬ್ಬನು ಬಹು ರುಚಿ ಎಂದು ಚಪ್ಪರಿಸುವನು. ವಿಷಯೇಂದ್ರಿಯ ಸಂಬಂಧದಿಂದ ಜನ್ಯವಾದ ಅನುಭವದಲ್ಲಿ 'ಇದು ನನಗೆ ಇಷ್ಟ ಅಥವಾ ಇದು ಅನಿಷ್ಟ' ಎಂಬ (ರಾಗದ್ವೇಷಗಳೆಂಬ) ಅಭಿಮಾನವೇ ಸುಖದುಃಖ

ಗಳಿಗೆ ಕಾರಣವೆಂದಮೇಲೆ ಒಬ್ಬನಿಗೆ ಒಂದು ವಸ್ತುವಿನಲ್ಲಿ ರಾಗವೇಕೆ ಮತ್ತೊಬ್ಬನಿಗೆ ಅದೇ ವಸ್ತುವಿಷಯದಲ್ಲಿ ದ್ವೇಷವೇಕೆ, ಎಂಬ ಪ್ರಶ್ನೆಯನ್ನು ಉತ್ತರಿಸಲು ಯತ್ನಿಸಿದರೆ, ಕೊನೆಗೆ ಅವರವರ ಸ್ವಭಾವವೇ ಮುಖ್ಯ ಕಾರಣವೆಂದು ಏರ್ಪಡುತ್ತದೆ. ಅಲ್ಲದೇ, ಇಂದ್ರಿಯಗಳದ್ವಾರಾ ವಿಷಯ ಗಳನ್ನು ಭೋಗಿಸುವುದರಿಂದ ಸುಖದುಃಖಾದಿ ಅನುಭವಗಳನ್ನು ಪಡೆಯುವ ದೇಹಭಿನ್ನಜ್ಞಾನ ವಿಶಿಷ್ಟ ವಸ್ತುವೂ ಅನುಭವಸಿದ್ಧವಾಗಿದೆ. 'ನಾನು ಸುಖೀ, ನಾನು ದುಃಖೀ, ನನ್ನ ದೇಹ, ನನ್ನ ಇಂದ್ರಿಯಗಳು' ಇತ್ಯಾದಿ ಜ್ಞಾನದಲ್ಲಿ ಗೋಚರಿಸುವ 'ನಾನು' ಎಂಬುದೇ ಅದು. ಅದು, ತನ್ನನ್ನೂ, ಇತರ ವಸ್ತುಗಳನ್ನೂ ತಿಳಿಯುವ ಶಕ್ತಿಯುಳ್ಳದ್ದು. ಆದ್ದರಿಂದ ಚೇತನ ವೆಂದು ಕರೆಯಲ್ಪಡುತ್ತದೆ. ಪ್ರತಿದೇಹದಲ್ಲಿ ಒಂದು ಚೇತನವಿದೆ. ಅಸಂಖ್ಯಾತ ದೇಹಗಳಲ್ಲಿ ಅಸಂಖ್ಯಾತ ಚೇತನರಿದ್ದಾರೆ. ಈ ಚೇತನರಿಗೆ ದೇಹಸಂಬಂಧವು ಈಗ ಮಾತ್ರ ಉಂಟಾಗಿದ್ದು, ಈ ದೇಹದೊಂದಿಗೆ ಅವನ ನಾಶವೂ ಆಗುವದಿದ್ದರೆ, ಜಗತ್ತಿನಲ್ಲಿ ಕಾಣುವ ವೈಚಿತ್ರ್ಯವನ್ನು ನಿರ್ವಹಿ ಸಲು ಬರುವುದಿಲ್ಲ. ಜ್ಞಾನ, ಅಜ್ಞಾನ, ಐಶ್ವರ್ಯ, ದಾರಿದ್ರ್ಯ, ಸುಖ, ದುಃಖ ಮೊದಲಾದ ಅನಂತ ವಿಚಾರಗಳಲ್ಲಿ ಪರಸ್ಪರ ಕಂಡುಬರುವ ತಾರತಮ್ಯಗಳು ಬೇರಾವ ಕಾರಣಗಳಿಂದಲೂ ಉಪಪನ್ನವಾಗುವುದಿಲ್ಲ. ಆದ್ದರಿಂದ ಚೇತನರು ಸ್ವರೂಪದಿಂದ ನಿತ್ಯರಾಗಿದ್ದು, ದೇಹದಿಂದ ದೇಹಾಂತರಗಳನ್ನು ಹೊಂದುತ್ತಾ, ಸ್ವಭಾವದಿಂದಲೇ ಭಿನ್ನರಾಗಿ, ಸಂಸಾರದಲ್ಲಿ ಸಂಚರಿಸುತ್ತಿರುವರೆಂದು ಸಿದ್ಧವಾಗುತ್ತದೆ. ಪ್ರಯತ್ನಕ್ಕೆ ಅನುಸಾರವಾದ ಫಲವೂ ದೊರೆಯದೇ, ವಿರುದ್ಧವಾದ ಅನಿಷ್ಟಫಲಗಳೂ ದೊರೆಯುವುದರಿಂದ, ಸುಖ ದುಃಖಗಳು ನಮ್ಮ ಅಧೀನವಲ್ಲವೆಂಬುದು ಸರ್ವಾನುಭವಸಿದ್ಧವಾಗಿದೆ. ಅಸ್ವತಂತ್ರರಾದ ಈ ಚೇತನರು ಸ್ವತಂತ್ರ ವಸ್ತುವೊಂದರ ವಶರಾಗಿ, ಅದರ ಪ್ರೇರಣೆಯಿಂದ, ತಮ್ಮ ಸ್ವಭಾವ ಮತ್ತು ಪೂರ್ವಕರ್ಮಗಳಿಗನುಸಾರವಾಗಿ ಚೇಷ್ಟಿಸುತ್ತಾ, ಅದರಿಂದ ದತ್ತವಾದ ಫಲಗಳನ್ನುಪಭೋಗಿಸುತ್ತಾ ಸಾಗಿದ್ದಾರೆ. ಕರ್ಮಾನುಸಾರವಾದ ದೇಹ ಗಳನ್ನು ಹೊಂದುತ್ತಾರೆ. ಸ್ವಭಾವಾನುಸಾರವಾದ ಕರ್ಮಗಳಲ್ಲಿ ತೊಡಗು ತ್ತಾರೆ. ಫಲಸ್ವಾಮಿಯಾದ ಆ ಸ್ವತಂತ್ರವಸ್ತುವಿನ (ಪರಮಾತ್ಮ,

ಪರಬ್ರಹ್ಮ ಇತ್ಯಾದಿ ನಾಮಗಳಿಂದ ಕರೆಯಲ್ಪಡುವ ಈ ವಸ್ತುವಿನ) ನಿತ್ಯಾಧೀನರಾಗಿ ತಮ್ಮ ಸ್ವಭಾವಕ್ಕನುಗುಣವಾದ ಫಲಗಳನ್ನು ಹೊಂದುತ್ತಾರೆ.

ಕೇವಲ ಈ ದೇಹವು ಬಿದ್ದುಹೋಗುವವರೆಗೆ ಸುಖವನ್ನು ಹೊಂದಲು ಯತ್ನಮಾಡುವುದಕ್ಕೂ, ಅನೇಕಾನೇಕ ದೇಹಗಳಲ್ಲಿ ಸಂಚರಿಸುವ ಸಂದರ್ಭದಲ್ಲಿ, ಆ ಎಲ್ಲ ದೇಹಗಳಲ್ಲಿಯೂ ಆದಷ್ಟು ಸುಖವನ್ನು ಹೊಂದಿ, ದುಃಖಪ್ರಚುರವಾದ ಈ ನಶ್ವರ ದೇಹಗಳನ್ನು ಪುನಃ ಹೊಂದದಂತೆ ಸಾಧಿಸಿಕೊಂಡು ತನ್ನ ನಿತ್ಯಸ್ವರೂಪ ಸ್ಥಿತಿಯನ್ನು ಹೊಂದಲು ಮಹದಂತರವಿರಬೇಕೆಂಬುದು ಯುಕ್ತಿಸಿದ್ಧವಲ್ಲವೇ? ಹಾಗೂ, ವಿಷಯಭೋಗದಿಂದ ದೊರೆಯುವ ಸುಖವು ಅಲ್ಪವೂ ಕ್ಷಣಿಕವೂ ಆಗಿದೆ. ಎಲ್ಲ ಪ್ರಾಣಿಗಳಲ್ಲಿ ನಿರೂಢವಾಗಿರುವ ನಿತ್ಯಸುಖಾಪೇಕ್ಷೆಯು ನೈಸರ್ಗಿಕವಾಗಿ ನೆಲೆಸಲು ಕಾರಣವಿಲ್ಲ; ಪೂರ್ತಿಗೊಳಿಸಲ್ಪಡಲು ಶಕ್ಯವಾದುದೇ ಇರಬೇಕು. ಆದ್ದರಿಂದ ಇದನ್ನು ಸಾಧಿಸುವ ಮಾರ್ಗವನ್ನು ಕಂಡುಕೊಳ್ಳಬೇಕಾದುದು ಅತ್ಯವಶ್ಯಕ. ಈ ನಿತ್ಯಸುಖದ ಸಿದ್ಧಿಯೇ ಪರಮಪುರುಷಾರ್ಥವು. ಜ್ಞಾನಿಗಳಾದ ದಾಸರಾಯರು ಈ ಸಾಧನಮಾರ್ಗದ ಸರಳಚಿತ್ರವನ್ನು ಹೀಗೆ ಮುಂದಿಟ್ಟಿರುವರು:—

ಮಾಡಲರಿಯೆ ಸುಸಾಧನವನು। ದುಷ್ಟಚಿತ್ತನು। ಪಾಪಕರ್ಮದಿ ರತನು
ಬೇಡುವೆ ಬಹುವಿಧ ಸುಖವನು। ಆಶಾಬದ್ಧನು। ಇದಕೆ ಗತಿಯೇನು
ಬೇಡಿದುದೆಲ್ಲ ಕೊಡುವೆ ನೀನು। ಎಂದು ಬಂದೆನು। ಆಶ್ರಿತ ಸುರಧೇನು
ಬೇಡದಂದದಿ ಮಾಳ್ಪ ಧೊರೆ ನೀನು। ಇದೇ ವರವನು। ನೀಡಬಹುದಯ್ಯ ನೀನು (ಗುರುಗೋಪಾಲ ವಿಠಲ)

ನಿಚ್ಚ, ಸುಭಕುತಿಯೊಳಚ್ಯುತನಂಘ್ರಿಗ
ಳರ್ಚಿಸಿ ಮೆಚ್ಚಿಸುತೆಚ್ಚರದಿ
ತುಚ್ಛ ವಿಷಯಗಳಿಗಿಚ್ಛೈಸದೆ ಯ
ದೃಚ್ಛ ಲಾಭದಿಂ ಪ್ರೋಚ್ಚನಾಗುವದೆ॥ ಫಲವಿದು ಬಾಳ್ದುದಕೆ
(ಜಗನ್ನಾಥವಿಠಲ)

ಎಲ್ಲ ಸಜ್ಜನರ ಮನದ ನಾಸ್ತಿಕ ಭಾವನೆಯು ನಷ್ಟವಾಗಿ ಶ್ರದ್ಧಾ-ಭಕ್ತಿಗಳು ಅಂಕುರಿಸುವಂತೆ ಶ್ರೀಹರಿವಾಯುಗಳು ಅನುಗ್ರಹಿಸಲಿ.

ಓಂ ತತ್ಸತ್ ಓಂ

ದಾಸರಾಯರ ಹಿರಿಮೆ

ಲೇಖಕರು:
ವಿದ್ವಾನ್ ಶ್ರೀ ಎನ್. ಕೃಷ್ಣಮೂರ್ತಿ B.A.(Hon.); B.O.L.
ಸಂಸ್ಕೃತ ಅಸಿಸ್ಟೆಂಟ್ ಪ್ರೊಫೆಸರ್, ಬೆಂಗಳೂರು

★

"ದಾಸರೆಂದರೆ ಪುರಂದರದಾಸರಯ್ಯ" ಎಂದು ಚಂದ್ರಿಕಾಚಾರ್ಯರು ತುಂಬು ಬಾಯಿಯಿಂದ ಪ್ರೇಮ ಪುರಸ್ಸರವಾಗಿ ಹೊಗಳಿದ ದಾಸವರ್ಯರೇ ಪುರಂದರದಾಸರು. ದಾಸರಾಯರೆಂದು ಹರಿದಾಸ ಪ್ರಪಂಚದಲ್ಲಿ ಅವರಿಗೇ ಪ್ರಸಿದ್ಧಿ. ಮುಂಬರಲಿರುವ ಅಮಾವಾಸ್ಯೆಯದಿನ ಇಡೀ ಕರ್ಣಾಟಕವೇ-ಸಾಹಿತಿಗಳೂ, ಸಂಗೀತಕಾರರೂ ಮತ್ತು ಹರಿದಾಸರೂ-ದಾಸರಾಯರ ಸವಿನೆನಪನ್ನು ತಂದುಕೊಂಡು ತಮತಮಗೆ ತೋರಿದ ರೀತಿಯಲ್ಲಿ ಅವರನ್ನು ಆರಾಧಿಸುವರು. ಈ ಲೇಖನದ ಉದ್ದೇಶವಾದರೂ ಅದೇಯೆ

ನಾಲ್ಕು ಶತಮಾನಗಳ ಹಿಂದೆ ರೂಪುವೆತ್ತು ಹರಿಭಕ್ತರಲ್ಲಿ ಜಾಗ್ರತಿ ಯನ್ನುಂಟುಮಾಡಿ ಲಲಿತವೂ, ಮಧುರವೂ ಆದ ಕನ್ನಡನುಡಿಯಲ್ಲಿ ತತ್ವದ ತಿರುಳನ್ನೇ ಬಿತ್ತಿದ ಮಹನೀಯರಿವರು. ನಾಲ್ಕು ಲಕ್ಷಕ್ಕಿಂತ ಹೆಚ್ಚಾಗಿ ಕೃತಿಗಳನ್ನು ರಚಿಸಿ "ಪುರಂದರೋಪನಿಷತ್" ಎಂಬ ಪ್ರಶಸ್ತಿ ಯನ್ನು ತಮ್ಮಹಾಡುಗಬ್ಬಕ್ಕೆ ತಮ್ಮ ಆಜನ್ಮದ ಗುರುಗಳಿಂದಲೇ ಸಂಪಾದಿ ಸಿಕೊಂಡವರಿವರು. ದಾಸಸಾಹಿತ್ಯವೃಕ್ಷವು ನರಹರಿತೀರ್ಥರೇ ಮೊದ ಲಾದ ಪ್ರಾಚೀನರಿಂದ ಬಿತ್ತಲ್ಪಟ್ಟು, ಶ್ರೀಪಾದರಾಜರು, ವ್ಯಾಸರಾಜರು ಮತ್ತು ವಾದಿರಾಜರೆಂಬ ರಾಜತ್ರಯದಿಂದ ಅಂಕುರಿತವಾಯಿತು. ಅದು ವೃಕ್ಷವಾಗಿ ಕವಲೊಡೆಯುವಂತೆ ಮಾಡಿದ ಯಶಸ್ಸು-ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ದಾಸರಾಯರಿಗೇ ಸೇರಿದ್ದು. ಆದ್ದರಿಂದ ಹರಿದಾಸ ಸತ್ಸಂಪ್ರದಾಯಪ್ರವರ್ತಕರೆಂಬ ಬಿರುದು ಇವರಿಗೇ ಸಲ್ಲುವುದಾಗಿದೆ. ಇಂತಹ ಮಹನೀಯರ ಹಿರಿಮೆಯು ತಾನೇ ತಾನಾಗಿ ಭಾಸವಾಗುತ್ತಿದ್ದರೂ

ಸ್ವಲ್ಪಮಟ್ಟಿಗೆ—ಲೇಖಕನ ಬುದ್ಧಿಗೆ ತಕ್ಕಂತೆ—ಅದನ್ನು ಇಲ್ಲಿ ಸ್ಪಷ್ಟ ಪಡಿಸಲಾಗಿದೆ.

ಸಾಮಗಾನಪ್ರಿಯನಾದ ಲಕ್ಷ್ಮೀರಮಣನನ್ನು ವೀಣಾಗಾನದಿಂದ ಆರಾಧಿಸಿ ಸಾಧನೆ ಮಾಡಿಕೊಳ್ಳುವ ದೇವರ್ಷಿಗಳಾದ ನಾರದರೇ ದಾಸರಾಯರಾಗಿ ಜನ್ಮ ತಾಳಿದರೆಂದು ಹೇಳುವುದು ಸಹಜವಾಗಿಯೇ ಇದೆ. ನಾರವೆಂದರೆ ಜ್ಞಾನವನ್ನು ಕೊಡುವವರಲ್ಲವೇ ನಾರದರು; ಆತ್ಮಜ್ಞಾನವನ್ನು ಸ್ವಾವರರಿಗೆ ಕೊಡುವ ಪವಿತ್ರ ಕೆಲಸವನ್ನು ಹೊತ್ತ ಈ ದೇವರ್ಷಿಗಳು ಸಂಸ್ಕೃತಜ್ಞಾನಶೂನ್ಯರಾದ ಸಾತ್ವಿಕ ಜೀವರಾಶಿಗಳಿಗೆ ಪ್ರಾಕೃತಭಾಷೆಯಲ್ಲಿ ಪರತತ್ವರಹಸ್ಯವನ್ನೇ ಬಚ್ಚಿಟ್ಟಿರುವರು. ಅಂದರೆ ಪಂಡಿತರಿಗೆ ಅವರ ಕೃತಿಗಳಿಂದ ಉಪಯೋಗವಿಲ್ಲವೆಂದಲ್ಲ. ಶಾಸ್ತ್ರಸಾರ ವನ್ನು ಅನಾಯಾಸವಾಗಿ ಕೆಲವೇ ಮಾತುಗಳಲ್ಲಿ ತಿಳಿಯಬಯಸುವ ಸರ್ವರಿಗೂ ಇವರ ಕೃತಿಗಳು ಬಹು ಸಹಾಯಕವಾಗಿವೆ. ಈ ಕಾರಣ ಗಳಿಂದ ಈ ಲೇಖನದಲ್ಲಿ ಅವರ ಕೆಲವು ಕೃತಿಗಳ ಆಧಾರದಿಂದ ದಾಸರಾಯರ ಹಿರಿಮೆಯನ್ನು ತಿಳಿಸುವುದು ಸೂಕ್ತವಾಗಿದೆ.

ಮಾನವಜನ್ಮವು ಅದರಲ್ಲೂ ವಿಷ್ಣುಭಕ್ತನ ಜನ್ಮವು ಸಾಧನಜನ್ಮ ಗಳಲ್ಲಿ ಶ್ರೇಷ್ಠವೆಂದು ಶಾಸ್ತ್ರಗಳೇ ಸಾರುತ್ತಿವೆ. ಮನ ಮೊದಲಾದ ಏಕಾದಶೇಂದ್ರಿಯಗಳಿಂದ ಹೃಷೀಕೇಶನನ್ನು ಆರಾಧಿಸುವ ಭಾಗ್ಯ ಈ ಜನ್ಮಕ್ಕಲ್ಲದೆ ಮತ್ತಾವುದಕ್ಕುಂಟು? ಇಂತಹ ಪರಮ ದುರ್ಲಭವಾದ ಸಾಧನಜನ್ಮವು ಬಂದಿದ್ದೂ ಅದನ್ನು ಸಾರ್ಥಕ ಮಾಡಿಕೊಳ್ಳದಿರುವ ಮಾನವನಲ್ಲಿ ಮಾನವತೆಯಾದರೂ ಇದೆಯೆಂದು ಹೇಳಲಾದೀತೇ "ಏತದ್ಬುಧ್ವಾ ಬುದ್ಧಿಮಾನ್ಸ್ಯಾಃ ಕೃತಕೃತ್ಯಶ್ಚ ಭಾರತ" (ಪರಮಾತ್ಮನು ಕ್ಷರಾಕ್ಷರ ಪುರುಷರಿಗಿಂತ ಉತ್ತಮನಾಗಿ ಭಿನ್ನನಾಗಿ ಇರುವುದರಿಂದಲೇ ಲೋಕದಲ್ಲೂ ವೇದಗಳಲ್ಲೂ ಪುರುಷೋತ್ತಮನೆಂದು ಪ್ರಸಿದ್ಧನು ಎಂಬ ಅಂಶವನ್ನು ತಿಳಿದು ನೀನು ಬುದ್ಧಿವಂತನಾಗು ಮತ್ತು ಕೃತಕೃತ್ಯನಾಗು) ಎಂಬ ಭಗವದುಕ್ತಿಯಂತೆ ಜ್ಞಾನವನ್ನು ಸಂಪಾದಿಸದೆ ಮನುಷ್ಯಜನ್ಮವು ಸಾರ್ಥಕವಾಗುವುದಿಲ್ಲ. ಲೌಕಿಕ ಪದಾರ್ಥಜ್ಞಾನವೆಲ್ಲವೂ ಲೋಕವಿಲಕ್ಷಣ ನಾದ ಪರಮಾತ್ಮನ ಜ್ಞಾನಕ್ಕೆ ಅಂಗವಾದ್ದರಿಂದ ಪ್ರಧಾನವಾದ ಆತ್ಮ-

ಜ್ಞಾನವೇ ಮುಖ್ಯವಾಗಿ ಸಂಪಾದಿಸಬೇಕಾದುದು. ಆತ್ಮಜ್ಞಾನಕ್ಕಾಗಿ ಸರ್ವಜೀವರೂ ಸ್ವೋತ್ತಮರನ್ನು ಆರಾಧಿಸಿ ಅವರ ಅನುಗ್ರಹ ಪಡೆಯ ಬೇಕೆಂಬುದು ಸಿದ್ಧಾಂತದ ಮಾತು. ಆದರೆ ಯಾರು ಯಾರನ್ನು ಆರಾಧಿಸಿ ಏನನ್ನು ಸಂಪಾದಿಸಿಕೊಳ್ಳಬೇಕೆಂಬುದು ತಿಳಿದಿದ್ದರಲ್ಲವೇ? ಅವರನ್ನು ಪೂಜಿಸಲು ಮುಮುಕ್ಷುಗಳು ಪ್ರವರ್ತಿಸುವರು? ಮೋಕ್ಷ-ಸಾಧನೆಯಲ್ಲಿ ಸಾಗುತ್ತಿರುವವನಿಗೆ ಮೊದಲು ತನ್ನ ಕಾರ್ಯವು ನಿರ್ವಿಘ್ನ ವಾಗಿ ನಡೆಯುವಂತಾಗಬೇಕು; ಅದನ್ನು ಮಾಡಲು ಮನಸ್ಸು ಬರಬೇಕು, ಪರಮಾತ್ಮ ಮತ್ತು ಅವನ ಪರಿವಾರದಲ್ಲಿ ತಾರತಮ್ಯೋಪೇತವಾದ ಭಕ್ತಿ ಹುಟ್ಟಬೇಕು; ಶಾಸ್ತ್ರಾರ್ಥವು ತಿಳಿದಿರಬೇಕು; ಸತ್ಕರ್ಮಗಳನ್ನು ಮಾಡುವು ದರ ಮೂಲಕ ಸಮೀಚೀನವಾದ ಜ್ಞಾನ ಹುಟ್ಟಬೇಕು, ಪರಮಾತ್ಮನನ್ನು ಆರಾಧಿಸುವ ಕಾಲದಲ್ಲಿ ಮನಸ್ಸಿನಲ್ಲಿ ಆನಂದವು ಮೊಳೆಯಬೇಕು— ಹೀಗಿದ್ದಲ್ಲಿ ಮಾತ್ರ ಇವನ ಸಾಧನೆಯು ಸಮಗ್ರವಾಗಿ ಹರಿಯ ಅತ್ಯರ್ಥ ಪ್ರಸಾದಕ್ಕೆ ಕಾರಣವಾಗುತ್ತದೆ. ಶ್ರೀಹರಿಯ ಉತ್ತಮ ಪ್ರಸಾದವೇ ಮೋಕ್ಷಕ್ಕೆ ಕಾರಣ. ಈ ಸಾಧನೆಯಾದರೂ ಪರಮಾತ್ಮನ ಅನುಗ್ರಹ ದಿಂದಲೇ ನಡೆಯುವುದೇ ಹೊರತು ಬೇರೆಯಲ್ಲ. ಸರ್ವರಲ್ಲಿಯೂ ಇದ್ದು ಕೆಲಸ ಮಾಡಿಸುವವನು ಅವನೇ ಅಲ್ಲವೇ? ಈಯೆಲ್ಲ ತತ್ವಗಳನ್ನೂ ದಾಸರಾಯರು ಎಂಟೇ ಸಾಲಿನ ಸಣ್ಣ ಉಗಾಭೋಗದಲ್ಲಿ ಸಂಗ್ರಹಿಸಿರುವರು:

ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ
ಮುಕುತಿ ಪಥಕೀವ ಮನ ಮಹರುದ್ರ ದೇವರು
ಭಕುತಿದಾಯಕಳು ಸಿರಿಭಾರತೀದೇವಿ
ಯುಕುತಿ ಶಾಸ್ತ್ರಗಳಲ್ಲಿ ವನಜಸಂಭವನರಸಿ
ಸತ್ಕರ್ಮಗಳ ನಡೆಸಿ ಸುಜ್ಞಾನ ಮತಿಯಿತ್ತು
                    ಪರಿಪಾಲಿಸುವ ನಮ್ಮ ಪವಮಾನನು
ಚಿತ್ತದಲಿ ಆನಂದ ಸುಖವನೀವಳು ರಮಾ
ಭಕ್ತಜನರೊಡೆಯ ಶಿರಿ ಪುರಂದರ ವಿಠ್ಠಲನು
ಸತತ ಇವರಲಿ ನಿಂತು ಕೃತಿಯ ನಡೆಸುವನು

ಸಾಧನಸಿದ್ಧಿಗಾಗಿ ವಿನಾಯಕನೂ, ಅಲ್ಲಿ ಮನಸ್ಸು ಪ್ರವರ್ತಿಸುವಂತೆ

ಮಹದೇವರೂ, ಹರಿಭಕುತಿಯನ್ನು ಭಾರತೀದೇವಿಯೂ, ಶಾಸ್ತ್ರಾರ್ಥ ಜ್ಞಾನವನ್ನು ಸರಸ್ವತೀದೇವಿಯೂ, ಸತ್ಕರ್ಮಾನುಷ್ಠಾನಪೂರ್ವಕ ಸುಜ್ಞಾನವನ್ನು ವಾಯುದೇವರೂ, ಹರಿಭಕುತಿಯಿಂದ ಮನಸ್ಸಿನಲ್ಲಿ ಆನಂದವನ್ನು ರಮಾದೇವಿಯೂ ಕೊಡುವರೆಂದು ಸಂಗ್ರಹಿಸಿರುವುದಲ್ಲದೆ ಇವರೆಲ್ಲರಲ್ಲಿಯೂ ನಿಂತು ಅನುಗ್ರಹ ಮಾಡಿಸಿ ಭಕುತರ ಸಾಧನೆಯನ್ನು ಆಗುಮಾಡಿಸುವವನು ಶ್ರೀಹರಿಯೇ ಎಂದು ಪರಮರಹಸ್ಯತತ್ವವನ್ನು ಲಲಿತವಾಗಿ ಬಿತ್ತರಿಸಿರುವರು.

ಸಾತ್ವಿಕ ಜೀವರಾಶಿಗಳ ಸಾಧನೆಯನ್ನು ಕರುಣಾಸಮುದ್ರನಾದ ಶ್ರೀ ಹ ರಿ ಯೇ ನಡೆಸುವನೆಂದು ಹೇಗೆ ತಿಳಿಸಿರುವರೋ ಹಾಗೆಯೇ ಅತಿಮುಖ್ಯ ಸಾಧನವಾದ ಜಗತ್ಸತ್ಯತ್ವ ಜ್ಞಾನ, ಭೇಧನಿತ್ಯತ್ವ ಜ್ಞಾನ, ಮತ್ತು ಜೀವರತಾರತಮ್ಯಪೂರ್ವಕ ವಿಷ್ಣುಸರ್ವೋತ್ತಮತ್ವಜ್ಞಾನ ಇವು ಗಳನ್ನೂ ತಮ್ಮ ಒಂದೇ ಒಂದುಕೃತಿಯಲ್ಲಿ ಸಂಗ್ರಹಿಸಿರುವ ರೀತಿಯನ್ನು ನೋಡಿದರೆ ಯಾರಿಗೆತಾನೇ ಆಶ್ಚರ್ಯವಾಗದಿರದು ?

ಸತ್ಯ ಜಗತಿದು ಪಂಚಭೇದವು ನಿತ್ಯ ಶ್ರೀ ಗೋವಿಂದನ
ಕೃತ್ಯವರಿತು ತಾರತಮ್ಯದಿ ಕೃಷ್ಣನಧಿಕೆಂದು ಸಾರಿರೈ||

ಎಲ್ಲ ಜ್ಞಾನಕ್ಕಿಂತ ಮೊದಲು ಜಗತ್ಸತ್ಯತ್ವ ಜಾನ ಮುಮುಕ್ಷುವಿಗೆ ಅತ್ಯವ ಶ್ಯಕ. ಹಿರಿಯ ಮಹಾಮಹಿಮೆಯು ಸತ್ಯವೂ ವಿಚಿತ್ರವೂ ಆದ ಜಗನ್ನಿ ರ್ಮಾಣಾದಿ ಮಹಾತ್ಮ್ಯದಿಂದಲ್ಲವೇ ತಿಳಿಯಬೇಕಾಗಿದೆ. ಆದ್ದರಿಂದಲೇ ನ್ಯಾಯಾಮೃತ ಮೊದಲಾದ ಉದ್ಗ್ರಂಥಗಳಲ್ಲಿ ಮೊದಲು ಜಗತ್ಸತ್ಯತ್ವವನ್ನು ಸ್ಥಾಪಿಸಿರುವುದು. ಇದನ್ನರಿತ ದಾಸರಾಯರು ಮೊದಲಲ್ಲಿ ಅದನ್ನು ಸೇರಿಸಿ ಅದರ ಪ್ರಾಮುಖ್ಯವನ್ನು ತಿಳಿಸಿರುವರಲ್ಲವೇ? ಭೇದವು ಸತ್ಯವೆಂದು ಮಾತ್ರ ತಿಳಿದರೆ ಸಾಲದು. ಏಕೆಂದರೆ ಸತ್ಯವಾದ ಮಾತ್ರಕ್ಕೇ ಸದಾಕಾಲದಲ್ಲೂ ಅದು ಇರಬೇಕೆಂಬ ನಿಯಮವೇನೂ ಇಲ್ಲ. ಈ ಕಾರಣದಿಂದ ಭೇಧವು ಕೆಲಕಾಲವಿದ್ದು ಅನಂತರ ಹೋಗುವುದೆಂದು ತಿಳಿದರೂ ಸಿದ್ಧಾಂತವನ್ನು

ಅರಿತಂತಾಗುವುದಿಲ್ಲ. ಜೀವ ಪರಮಾತ್ಮರ, ಜೀವ ಜೀವರ, ಜೀವ ಜಡರ, ಜಡಪರಮಾತ್ಮರ ಮತ್ತು ಜಡ ಜಡದ ಪರಸ್ಪರ ಭೇದವು ಸತ್ಯವಷ್ಟೇ ಅಲ್ಲ. ನಿತ್ಯವೂ ಎಂದು ತಿಳಿಯಬೇಕಾದುದು ಅತ್ಯಗತ್ಯ. ಈ ತತ್ವವನ್ನೂ ದಾಸರಾಯರು ಪಲ್ಲವಿಯಲ್ಲಿಯೇ ನುಡಿದಿರುವರಲ್ಲವೆ? ಹರಿಸರ್ವೋತ್ತಮ ಜ್ಞಾನವು ಜೀವತಾರತಮ್ಯ ಜ್ಞಾನಪೂರ್ವಕವಾಗಿರಬೇಕೇ ಹೊರತು ಬೇರೆಯಲ್ಲ. ಸರ್ವಜೀವರೂ ತಮ್ಮತಮ್ಮ ಯೋಗ್ಯತಾನುಸಾರ ಸಾಮರ್ಥ್ಯವನ್ನು ತೋರಿಸುವರು. ಶ್ರೀ ಹರಿಯೊಬ್ಬನೇ ನಿರವಧಿಕ ಸಮರ್ಥನೆಂಬ ಮಾಹಾತ್ಮ್ಯ ಜ್ಞಾನವು ಸುದೃಢವಾಗಿದ್ದಲ್ಲಿ ಮಾತ್ರ ಮುಮುಕ್ಷುವಿಗೆ ಶ್ರೀಹರಿಯಲ್ಲಿ ನಿರತಿಶಯ ಪ್ರೇಮ ಪ್ರವಾಹವು ಸಂತತವಾಗಿ ಹರಿಯುವುದು. ಈ ಸಿದ್ಧಾಂತ ತತ್ವವನ್ನೂ ದಾಸರಾಯರು ಪಲ್ಲವಿಯಲ್ಲೇ ಸಂಗ್ರಹಿಸಿ ಬಿಟ್ಟಿದ್ದಾರೆ.

ಮತ್ತೊಂದು ಕೃತಿರತ್ನದಲ್ಲಿ, ದಾಸರಾಯರು ಶ್ರೀ ಹರಿಯು ದೊರೆಯಲು ಬೇಕಾದ ಸಾಧನೆಗಳನ್ನು ಬಿತ್ತರಿಸುತ್ತಾ ಈ ಒಂದೊಂದು ಸಾಧನೆಯೊದಗಿದರೂ ಹರಿಯು ಒಲಿಯುತ್ತಿರುವನೆಂದು ತಿಳಿಯಬೇಕೆಂಬ ಅಂಶವನ್ನು ಬಹು ಸೊಗಸಾಗಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಗುರುಕರುಣೆಯಿಲ್ಲದೆ ಹರಿಕರುಣೆಯೆಲ್ಲಿ? ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂದು ಸಾರಿದ ದಾಸವರ್ಯರು ಗುರೂಪದೇಶವು ಹರಿಕರುಣೆಯಿಂದಲೇ ಒದಗುವುದು ಹಾಗೆ ಸದ್ಗುರೂಪದೇಶವಾದಮೇಲೆ ಹರಿಯ ದರ್ಶನಕ್ಕೆ ದಾರಿಯಾಯಿತೆಂದು ತಿಳಿಯಬೇಕೆಂದು "ವರಗುರು ಉಪದೇಶ ನೆರವಾಯಿತೆನಗೀಗ ಇನ್ನೇನಿನ್ನೇನು." ಎಂಬ ಕೃತಿಯಲ್ಲಿ ತೋರಿಸಿದ್ದಾರೆ. ಸದ್ಗುರೂಪದೇಶ, ಹರಿದಾಸರ ಸಂಗ, ಮಮಕಾರಹಾನಿ, ನಾಮಸ್ಮರಣ, ಏಕೋದ್ಯೆವವೆಂಬ ದೃಢನಂಬಿಕೆ, ಸದಾಕಾಲ ಶ್ರೀಹರಿಯ ಧ್ಯಾನ, ತಂದೆತಾಯಿ ಬಂಧು ಬಳಗ ಮುಂತಾದ ಎಲ್ಲರೀತಿಯಿಂದಲೂ ಪರಮಾತ್ಮನನ್ನು ಉಪಾಸಿಸುವುದು, ಈ ಉಪಾಸನೆಯಿಂದ ಆನಂದವು ಅನುಭವಕ್ಕೆ ಬರುವುದು, ಹರಿ ವಿಮುಖರಸಂಗಪರಿತ್ಯಾಗವು ಪರಮಾತ್ಮನ ಕರುಣೆಯು ಸ್ಥಿರವಾಯಿತೆನ್ನುವುದನ್ನು ತೋರಿಸುವುವು.

ಮತ್ತು ಇವೆಲ್ಲವನ್ನೂ ಕೊಟ್ಟಹರಿಯು ತನ್ನನ್ನೇ ಕೊಡುವನೆಂಬ ಸಾಧನೆ
ರಹಸ್ಯವನ್ನೆಲ್ಲ ಈ ಸಣ್ಣ ಕೃತಿಯಲ್ಲಿ ಸಂಕ್ಷೇಪಿಸಿರುವ ದಾಸರ ಜ್ಞಾನ
ಭಂಡಾರವಾದರೂ ಎಷ್ಟು ವಿಸ್ತಾರವಾದುದು!

ಹೃದಯವೆಂಬ ಹೊಲದಲ್ಲಿ ಮನಸ್ಸೆಂಬ ನೇಗಿಲಿಗೆ ಶ್ವಾಸೋಚ್ಛ್ವಾಸ
ಗಳೆಂಬ ಎತ್ತುಗಳನ್ನು ಜ್ಞಾನವೆಂಬ ಹಗ್ಗದಿಂದ ಕಟ್ಟಿ ಉತ್ತು ನಾಲಿಗೆತುದಿ
ಯಿಂದ ಹರಿನಾಮವೆಂಬ ಬೀಜವನ್ನು ಬಿತ್ತಬೇಕು. ನಿರ್ಮಮತೆಯೆಂಬ
ಗುಂಟುವೆಯಿಂದ ಕಳೆ ಕೀಳಬೇಕು. ಕಾಮಕ್ರೋಧಾದಿ ಮರಗಳನ್ನು
ಕಡಿದುಹಾಕಿ ಮನಶ್ಚಾಂಚಲ್ಯವೆಂಬ ಹಕ್ಕಿಯನ್ನು ಹೊಡೆದೋಡಿಸಿದರೆ
ಆಯುಷ್ಯರಾಶಿಯು ನಿಮ್ಮದಾಗುವುದು. ಇಲ್ಲವಾದರೆ ಉದಯಾಸ್ತಮಾನ
ಗಳೆಂಬ ಎರಡು ಕೊಳಗಗಳಲ್ಲಿ ಮೃತ್ಯುವು ನಿಮ್ಮ ಆಯುಷ್ಯವನ್ನು ಅಳೆಯು
ತ್ತಿರುವುದು. ಕೊನೆಗೆ ಆಯುಷ್ಯವೆಲ್ಲ ಬಯಲಾಗುವುದು. ಅಷ್ಟೇ ಅಲ್ಲ,
ಪಾಪರಾಶಿಯು ಹೆಚ್ಚುತ್ತ ಬರುವುದೆಂದು ಸುಂದರವಾದ ರೀತಿಯಿಂದ
ದಾಸರಾಯರು ಆಯುಷ್ಯಸಾರ್ಥಕತೆಗೆ ಹರಿನಾಮಸ್ಮರಣೆಯೇ ಮುಖ್ಯ
ವೆಂದು ತಿಳಿಸಿರುವರಲ್ಲವೇ?

ಶುದ್ಧ ಮನಸ್ಸಿನಲ್ಲಿಯೇ ಪರಮಾತ್ಮನು ಹೊಳೆಯಬೇಕಾದರೆ,
ಆದ್ದರಿಂದ ಮನಸ್ಸಿನ ಮುಸುರೆ ತೊಳೆದು ಮನಸ್ಸನ್ನು ಶೋಧಿಸಿ ಅಧರ್ಮ
ವನ್ನು ನಿರ್ಮೂಲಮಾಡಿ ಹರಿ ಪರಬೊಮ್ಮನೆಂದಾರಾಧಿಸಿದರೆ ಮುಕುತಿಯು
ದೂರವಾಗುವುದಿಲ್ಲವೆಂದು ಸಾರಿದ ದಾಸರಾಯರು ನಾರದಾಂಶರಲ್ಲದೆ
ಬೇರೆ ಯಾರು?

ಪರಿಪಕ್ವವಾದ ಭಕುತಿಯ ರೂಪವನ್ನಾದರೂ ಅವರು ಹೇಳದೆ ಇಲ್ಲ.
“ಇದೀಗ ಭಕುತಿಯು ಮತ್ತಿದೀಗ ಮುಕುತಿಯು” ಎಂಬ ಸುಂದರಕೃತಿಯಲ್ಲಿ
ಸದ್‌ಜ್ಞಾನ, ಸದ್ಭಕ್ತಿ, ಸದ್ವೈರಾಗ್ಯಗಳ ಸ್ವರೂಪವನ್ನು ತಿಳಿಸಿ ಸಾತ್ವಿಕ
ಜೀವರಾಶಿಗಳ ಕೃತ್ಯಪರಿಚಯ ಮಾಡಿಕೊಟ್ಟಿದ್ದಾರೆ ಕೇವಲ ಉಪದೇಶ
ದಿಂದ ಮಾತ್ರವಲ್ಲ—ನಾವು ಆಚರಿಸಿ ಆದರ್ಶವನ್ನು ಮುಂದಿಟ್ಟು

ಸಾತ್ವಿಕರನ್ನು ಸತ್ವಮಾರ್ಗಕ್ಕೆಳೆದ ದಾಸರಾಯರೇ ದಾಸವರ್ಯರು. ಆದ್ದರಿಂದಲೇ ವ್ಯಾಸತೀರ್ಥರು ಪುರಂದರದಾಸರೇ ಹರಿದಾಸರೆಂಬ ಅನ್ವರ್ಥ ನಾಮಕ್ಕೆ ಪಾತ್ರರೆಂದು ಹೇಳಿರುವರು.

ಅವರು ತೋರಿಸಿಕೊಟ್ಟ ಮಾರ್ಗದಲ್ಲಿ ಶ್ರೀಮದಾಚಾರ್ಯಾಂತರ್ಗತನನ್ನು ಆರಾಧಿಸುವ ಕಾರ್ಯದಲ್ಲಿ ನಾವು ತೊಡಗಿದರೆ ಅದೇ ನಿಜವಾಗಿ ನಾವು ಪುರಂದರದಾಸರಾಯರನ್ನು ಮೆಚ್ಚಿಸುವ ರೀತಿಯಲ್ಲಿ ಮಾಡುವ ಆರಾಧನೆ.

ಮನ್ಮನೋಭೀಷ್ಟವರದಂ ಸರ್ವಾಭೀಷ್ಟಫಲಪ್ರದಂ
ಪುರಂದರಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಂ

ಉಗಾಭೋಗ

*ಹಲ್ಲಣವಿಲ್ಲದ ಕುದುರೆ ಹತ್ತಿ ಓಡಿಸಿದಂತೆ
ಬೆಲ್ಲ ಹಾಕದ ಪರಮಾನ್ನದಂತೆ
ಸೊಲಿಗೆಯು ಬುಡದಲ್ಲಿ ಆಳಿದಂತೆ
ಎಲ್ಲರ ಸಾಧನ ಒಂದೆಂಬ ಜ್ಞಾನ ಉಂಟಾಗೆ
ಬೆಲ್ಲ ಬೇವಾಗುವುದವಗೆ ನೋಡಿ ಮೆದ್ದರೂನು!
ಮಲ್ಲಮರ್ದನ ನಮ್ಮ ಗೋಪಾಲವಿಠಲನ ಪಾದ-
ಪಲ್ಲವವನು ಕಾಣ ಎಲ್ಲಿ ಪೋದರೂನು

—ಶ್ರೀ ಗೋಪಾಲದಾಸರು

* ಅಗಾವು